# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜೂನ್ 02, 2022

ಸಂಪುಟ : 49 ಸಂಚಿಕೆ : 19 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


## ಮೊದಲು ಪರಿಹಾರ, ನಂತರ ದಾಖಲೆ

**ಅತಿವೃಷ್ಟಿ ಸಂದರ್ಭಗಳಲ್ಲಿ ಆಗುವ ಜೀವ ಹಾನಿ, ಮಳೆ ಹಾನಿ ಹಾಗೂ ಜಾನುವಾರುಗಳ ಹಾನಿ ವರದಿಯಾದ 24 ಗಂಟೆಯೊಳಗೆ ಪರಿಹಾರ ನೀಡಿ, ನಂತರ ದಾಖಲೆ ಪಡೆದುಕೊಳ್ಳಿ: ಡಿಸಿ**

ದಾವಣಗೆರೆ, ಜೂ.1 - ಅತಿವೃಷ್ಟಿ ಸಂದರ್ಭಗಳಲ್ಲಿ ಜೀವಹಾನಿ, ಮಳೆಹಾನಿ ಹಾಗೂ ಜಾನುವಾರುಗಳ ಹಾನಿಗಳಿಗೆ ಸಂಬಂಧಿಸಿದಂತೆ ಘಟನೆ ವರದಿಯಾದ 24 ಗಂಟೆಯೊಳಗೆ ಪರಿಹಾರ ನೀಡಿ, ಅನಂತರ ದಾಖಲೆಗಳನ್ನು ಪಡೆದುಕೊಳ್ಳಿ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಡಳಿತ ಭವನದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅವಘಡಗಳ ಸಂದರ್ಭಗಳಲ್ಲಿ ಸಂತ್ರಸ್ತರಿಗೆ ತಕ್ಷಣ ಪರಿಹಾರದ ಅವಶ್ಯಕತೆ ಇರುತ್ತದೆ. ಹಾಗಾಗಿ ಪರಿಹಾರ ನೀಡುವ ಮೂಲಕ ಅವರ ನೋವಿಗೆ ಸ್ಪಂದಿಸಲು ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಅದರಂತೆ ಎಲ್ಲಾ ಅಧಿಕಾರಿಗಳು ಕಾರ್ಯೋನ್ಮುಖರಾಗಬೇಕು ಎಂದು ಬೀಳಗಿ ಹೇಳಿದ್ದಾರೆ.

ಮಳೆಹಾನಿ ಪ್ರದೇಶಗಳಲ್ಲಿ ಸ್ಥಾಪಿಸುವ ಕಾಳಜಿ ಕೇಂದ್ರಗಳಲ್ಲಿ ಆರೋಗ್ಯ ತಪಾಸಣೆಯ ವ್ಯವಸ್ಥೆ ಮಾಡಬೇಕು. ಹಿಂದಿನ 5 ವರ್ಷಗಳಲ್ಲಿ ಗ್ರಾಮ ಹಾಗೂ ನಗರಗಳಲ್ಲಿ ನೀರು ತುಂಬಿ ಸಮಸ್ಯೆಯಾಗುತ್ತಿದ್ದ ಪ್ರದೇಶಗಳನ್ನು ಗುರುತಿಸಿ ಸರಿಪಡಿಸಬೇಕು ಎಂದು ಜಿಲ್ಲಾಧಿಕಾರಿ ಹೇಳಿದರು.



**ಮಳೆಗಾಲದ ಮುನ್ನೆಚ್ಚರಿಕೆ**

**ಕಾಳಜಿ ಕೇಂದ್ರಗಳಲ್ಲಿ ಆರೋಗ್ಯ ತಪಾಸಣೆ ವ್ಯವಸ್ಥೆ ಮಾಡಿಕೊಳ್ಳಬೇಕು. ನೀರು ತುಂಬಿ ಸಮಸ್ಯೆಯಾಗುವ ಪ್ರದೇಶಗಳನ್ನು ಸರಿಪಡಿಸಬೇಕು. ನದಿ, ಹಳ್ಳಗಳ ನೀರಿನ ಹರಿವಿನ ಮೇಲೆ ನಿಗಾ ಇಟ್ಟಿರಬೇಕು. ಹರಿಹರ, ಹೊನ್ನಾಳಿಗಳಿಗೆ ಬೋಟ್ ಹಾಗೂ ರಕ್ಷಣಾ ಸಲಕರಣೆಗಳ ಖರೀದಿ**

ನದಿ ಪಾತ್ರದಲ್ಲಿ ಪ್ರತಿ ಮೂರು ಗಂಟೆಗಳಿಗೊಮ್ಮೆ ನೀರಿನ ಮಟ್ಟದ ಮಾಹಿತಿ ಕಲೆ ಹಾಕಬೇಕು. ಹರಿಹರ ಹಾಗೂ ಹೊನ್ನಾಳಿ ಪಟ್ಟಣದ ಮುಳುಗಡೆಯಾಗುವ ಪ್ರದೇಶಗಳಲ್ಲಿ ಮುಂಜಾಗ್ರತೆ ವಹಿಸಬೇಕು. ಜಿಲ್ಲೆಯಲ್ಲಿ ನಾಲ್ಕೈದು ಅತಿ ದೊಡ್ಡ ದೊಡ್ಡ ಹಳ್ಳಗಳಿದ್ದು, ಅವುಗಳ ಮೇಲೂ ನಿಗಾ ವಹಿಸಬೇಕು ಎಂದರು.


ಗ್ರಾಮೀಣ ಪ್ರದೇಶಗಳಲ್ಲಿ ಚರಂಡಿ ಸ್ವಚ್ಛಗೊಳಿಸಿ. ವಿದ್ಯುತ್ ಕಂಬಗಳು, ಬೀದಿ ದೀಪಗಳ ಅರ್ಥಿಂಗ್ ವ್ಯವಸ್ಥೆ ಸರಿಯಾಗಿ ಮಾಡಿ. ಮಳೆಗಾಲದಲ್ಲಿ ಜಾನುವಾರುಗಳಿಗೆ ಬರುವ ರೋಗಗಳ ಬಗ್ಗೆ ಮುಂಜಾಗ್ರತಾ ಕ್ರಮಗಳನ್ನು ಮಾಡಿಕೊಳ್ಳಿ ಎಂದು ತಿಳಿಸಿದರು.

ಮಳೆಯ ಪ್ರಮಾಣ, (3ನೇ ಪುಟಕ್ಕೆ)

## ಪಠ್ಯ ಮಾರ್ಪಾಟಿಗೆ ಸರ್ಕಾರ

### ಹೆಚ್ಚಿದ ಅಪಸ್ವರ: ಸಚಿವ ನಾಗೇಶ್ ವರದಿ ನಂತರ ಸಿಎಂ ಕ್ರಮ

**ಸ್ವಾಮೀಜಿಗಳು ಹಾಗೂ ಇತರರ ಅಭಿಪ್ರಾಯಗಳನ್ನು ಪರಿಗಣಿಸಲಾಗುವುದು. ಈ ಎಲ್ಲ ವಿಚಾರಗಳ ಬಗ್ಗೆ ಸಮಗ್ರ ವರದಿ ಹಾಗೂ ವಾಸ್ತವಾಂಶವನ್ನು ತಿಳಿಸುವಂತೆ ಶಿಕ್ಷಣ ಸಚಿವರಿಗೆ ಸೂಚನೆ ನೀಡಲಾಗಿದೆ. ಈ ಬಗ್ಗೆ ವರದಿ ಪಡೆದು ಪರಿಶೀಲಿಸಿದ ನಂತರ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು. ನಾಳೆ ವರದಿ ದೊರೆಯಲಿದ್ದು, ಸಾಹಿತಿಗಳೊಂದಿಗೆ ಈ ಬಗ್ಗೆ ಚರ್ಚಿಸಲಾಗುವುದು.**



ಬೆಂಗಳೂರು, ಜೂ. 1 - ಮಠಾಧೀಶರು, ಕನ್ನಡಪರ ಸಂಘಟನೆಗಳು, ಸಾಹಿತಿಗಳು ಪಠ್ಯ ಪುಸ್ತಕ ಪರಿಷ್ಕರಣೆಗೆ ಅಪಸ್ವರವೆತ್ತಿದ ಹಿನ್ನೆಲೆಯಲ್ಲಿ ಸರ್ಕಾರ ಎಚ್ಚೆತ್ತುಕೊಂಡು ಕೆಲವು ಮಾರ್ಪಾಟಿಗೆ ಮುಂದಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಮಗ್ರ ವರದಿಯನ್ನು ನಾಳೆ ತಮಗೆ ನೀಡುವಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ನಾಗೇಶ್ ಅವರಿಗೆ ಸೂಚಿಸಿದ್ದಾರೆ.

ಕುವೆಂಪು ಹಾಗೂ ಬಸವಣ್ಣನವರ ಬಗ್ಗೆ ಸಮಿತಿಯವರು ನೀಡಿರುವ ಹೇಳಿಕೆಗಳು ವ್ಯಾಪಕ ಆಕ್ರೋಶಕ್ಕೆ ಕಾರಣವಾದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ವರದಿ ಕೇಳಿದ್ದಾರೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಯವರು, ಪಠ್ಯಪುಸ್ತಕ ಪರಿಷ್ಕರಣೆ ವರದಿ ಪರಿಶೀಲನೆಯ ನಂತರ ಶೀಘ್ರದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಪಠ್ಯಪುಸ್ತಕದ ಪರಿಷ್ಕರಣೆಗೆ ಸಂಬಂಧಿಸಿದಂತೆ, ಈಗಾಗಲೇ ಪಠ್ಯದಲ್ಲಿರುವ ಪಾಠಗಳನ್ನು ತೆಗೆಯುವಂತೆ ಕೆಲ ಸಾಹಿತಿಗಳು ಹೇಳುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಪಠ್ಯಪುಸ್ತಕ ಪರಿಷ್ಕರಣೆಯ ಬಗ್ಗೆ ಸಮಗ್ರ ವರದಿ ಕೇಳಲಾಗಿದೆ ಎಂದು ಹೇಳಿದ್ದಾರೆ.

ಇದುವರೆಗೂ ಈ ಪಠ್ಯ ಪುಸ್ತಕ ಸಮಿತಿ ನೇಮಕ ವಿಚಾರದಲ್ಲಿ ಯಾವುದೇ ಗೊಂದಲ ಆಗಿರಲಿಲ್ಲ. ಕನ್ನಡದ ಬಗ್ಗೆ ಇರುವ ಅಭಿಮಾನ, ಬಾವುಟದ ಬಗ್ಗೆ ಸಮಿತಿಯ ಅಧ್ಯಕ್ಷರು ಕೊಟ್ಟಿರುವ ಹೇಳಿಕೆಗಳು, ಸಾಹಿತಿಗಳ ಬಗ್ಗೆ ಹಾಗೂ ರಾಷ್ಟ್ರಕವಿ ಬಗ್ಗೆ ಮಾಡಿರುವ ಉದ್ಧಟತನ ಹಾಗೂ ಕೆಟ್ಟ ಅಭಿಪ್ರಾಯ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.

ಅಧ್ಯಕ್ಷರಾಗಿರುವ ವ್ಯಕ್ತಿ ಮೆಟ್ರೋದಲ್ಲಿ ಕನ್ನಡ ಬಳಕೆ ವಿಚಾರ, ಹಿಂದಿ ಹೇರಿಕೆ ವಿಚಾರ ಸಂದರ್ಭದಲ್ಲಿ 'ನನ್ನ ಮೇಲೆ ಹೇರಿಕೆಯಾದ ಮೊದಲ ಭಾಷೆ ಕನ್ನಡ' ಎಂದಿದ್ದಾರೆ. ಅಂತಹ ವ್ಯಕ್ತಿಯನ್ನು ಸಮಿತಿ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಇದರ ಜತೆಗೆ, ಕನ್ನಡ ಬಾವುಟದ ಬಗ್ಗೆ ಜನ ಭಾವನಾತ್ಮಕ ಸಂಬಂಧ ಹೊಂದಿದ್ದಾರೆ. ಇಂತಹ ಕನ್ನಡ ಬಾವುಟ ಬೇಕು ಎಂಬ ವಿಚಾರದ ಚರ್ಚೆ ಸಂದರ್ಭದಲ್ಲಿ ಅವರು ಹಗ್ಗದ ಮೇಲೆ ಇರುವ ಒಳಉಡುಪುಗಳನ್ನು ತೋರಿಸಿ ಇಲ್ಲಿಯೂ ಸಾಕಷ್ಟು ಬಾವುಟ ಹಾರಾಡುತ್ತಿವೆ ಎಂದು ಹೇಳಿ ನಾಡ ಬಾವುಟಕ್ಕೆ ಅಪಮಾನ ಮಾಡಿದ ದುರ್ದೈವಿ ಹಾಗೂ ಕೊಳಕು ಮನುಷ್ಯ ಎಂಬ ಮಾತು ಕೇಳಿ ಬಂದಿದೆ.

ಕುವೆಂಪು ಅವರು ಕರ್ನಾಟಕ ಏಕೀಕರಣಕ್ಕೂ ಮುನ್ನವೇ ದೇಶಕ್ಕೆ ಸ್ವಾತಂತ್ರ್ಯ ಬರುವ ಮುನ್ನ ಅಂದರೆ 1924ರಲ್ಲಿ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ ಎಂದು ಬರೆದು, ಆಗಲೇ ಭಾರತ ರಾಷ್ಟ್ರಕ್ಕೆ ಹಾಗೂ ಕರ್ನಾಟಕ ರಾಜ್ಯಕ್ಕೆ ಇದ್ದ ಬಾಂಧವ್ಯವನ್ನು ವರ್ಣಿಸಿದ್ದರು. ಅದರ ಬಗ್ಗೆಯೂ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. (3ನೇ ಪುಟಕ್ಕೆ)

## ಮೇ ತಿಂಗಳಲ್ಲಿ 1.41 ಲಕ್ಷ ಕೋಟಿ ಜಿ.ಎಸ್.ಟಿ. ಸಂಗ್ರಹ

ನವದೆಹಲಿ, ಜೂ. 1 – ಮೇ ತಿಂಗಳಲ್ಲಿ 1.41 ಲಕ್ಷ ಕೋಟಿ ರೂ.ಗಳ ಜಿ.ಎಸ್.ಟಿ. ಸಂಗ್ರಹವಾಗಿದೆ. ಇದು ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.44ರಷ್ಟು ಹೆಚ್ಚಳವಾಗಿದೆ.

ಏಪ್ರಿಲ್ ತಿಂಗಳಲ್ಲಿ ದಾಖಲೆಯ 1.68 ಲಕ್ಷ ಕೋಟಿ ರೂ. ಹಾಗೂ ಮಾರ್ಚ್‌ನಲ್ಲಿ 1.42 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿತ್ತು. ಆ ತಿಂಗಳುಗಳಿಗೆ ಹೋಲಿಸಿದರೆ ಮೇ ತಿಂಗಳಲ್ಲಿ ತೆರಿಗೆ (4ನೇ ಪುಟಕ್ಕೆ)

## ರಾಮ ಮಂದಿರ ಗರ್ಭಗುಡಿ ನಿರ್ಮಾಣಕ್ಕೆ ಶಿಲಾನ್ಯಾಸ

**ಮಂದಿರ ನಿರ್ಮಾಣ ಇನ್ನಷ್ಟು ಚುರುಕು - ಯೋಗಿ**

ಅಯೋಧ್ಯೆ, ಜೂ. 1 – ಇಲ್ಲಿನ ರಾಮ ಮಂದಿರದ ಗರ್ಭಗುಡಿಯ ನಿರ್ಮಾಣಕ್ಕೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಶಿಲಾನ್ಯಾಸ ನೆರವೇರಿಸಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಆಗಸ್ಟ್ 2020ರಂದು ಶಿಲಾನ್ಯಾಸ ನೆರವೇರಿಸಿದ್ದರು. ಸುಪ್ರೀಂ ಕೋರ್ಟ್ ಮಂದಿರದ ಪರ ಮಹತ್ವದ ತೀರ್ಪು ನೀಡಿದ ನಂತರ ನಿರ್ಮಾಣ ಕಾರ್ಯ ಆರಂಭವಾಗಿತ್ತು.

ಈಗ ಮುಂದಿನ ಹಂತದಲ್ಲಿ ಗರ್ಭಗುಡಿಗೆ ಶಿಲಾನ್ಯಾಸ ನೆರವೇರಿಸಲಾಗಿದೆ. ಇದರೊಂದಿಗೆ ದೇವಾಲಯ ನಿರ್ಮಾಣದ ಮುಂದಿನ ಹಂತ ಆರಂಭವಾದಂತಾಗಿದೆ. ದೇವಾಲಯದ ಅಡಿಪಾಯ ನಿರ್ಮಾಣದ (3ನೇ ಪುಟಕ್ಕೆ)

## ಕೌಟುಂಬಿಕ ಕಲಹ: ಜಿಲ್ಲಾಸ್ಪತ್ರೆ ವೈದ್ಯ ಆತ್ಮಹತ್ಯೆ



ದಾವಣಗೆರೆ, ಜೂ.1- ಇಲ್ಲಿನ ಜಿಲ್ಲಾಸ್ಪತ್ರೆಯ ವೈದ್ಯರೋರ್ವರು ಆತ್ಮಹತ್ಯೆ ಮಾಡಿಕೊಂಡ ಘಟನೆ ಬುಧವಾರ ನಗರದ ಎಸ್‌ಎಸ್ ಲೇಔಟ್ ಎ ಬ್ಲಾಕ್ ನ ಮೊದಲ ಕ್ರಾಸ್ ಬಳಿ ನಡೆದಿದೆ.

ಡಾ. ಅರುಣ್ ಚಂದ್ರ ಬೆಣ್ಣೆಹಳ್ಳಿ (37 ವರ್ಷ ) ಆತ್ಮಹತ್ಯೆಗೆ ಶರಣಾದ ವೈದ್ಯ ಎಂದು ಗುರುತಿಸಲಾಗಿದೆ. ಮಲೇಬೆನ್ನೂರಿನ ವೈದ್ಯ ಡಾ ಬಿ ಚಂದ್ರಶೇಖರ್ ಎಂಬುವವರ ಪುತ್ರರಾದ ಅರುಣ್ ಚಂದ್ರ ಅವರು, ತಮ್ಮ ಮನೆಯ ಬಾತ್ ರೂಂನಲ್ಲಿ ಜೀನ್ಸ್ ಪ್ಯಾಂಟ್ ಅನ್ನು ಕುತ್ತಿಗೆಗೆ ಬಿಗಿದುಕೊಂಡು ನೇಣಿಗೆ ಶರಣಾಗಿರುವ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ. ಕ ಡಾ. ಅರುಣ್ ಚಂದ್ರ ಆತ್ಮಹತ್ಯೆಗೆ ನಿಖರವಾದ ಮಾಹಿತಿ ಲಭ್ಯವಾಗಿಲ್ಲ,

ಸಿಜೆ ಆಸ್ಪತ್ರೆಯಲ್ಲಿ ಗುತ್ತಿಗೆ (2ನೇ ಪುಟಕ್ಕೆ)

## ಈಜುಕೊಳ ಶೀಘ್ರದಲ್ಲೇ ಆರಂಭ



**ಡಿಸಿ ಮಹಾಂತೇಶ ಬೀಳಗಿ ಭರವಸೆ**

**ಈಜುಕೊಳಕ್ಕೆ ರಾಜ್ಯ ಈಜು ಸಂಸ್ಥೆ ಕಾರ್ಯದರ್ಶಿ, ಅಂತರರಾಷ್ಟ್ರೀಯ ಈಜುಪಟು ಶರತ್ ಗಾಯಕ್‌ವಾಡ್ ಭೇಟಿ**

ದಾವಣಗೆರೆ, ಜೂ.1- ಈಜು ಪಟುಗಳ ಹಿತದೃಷ್ಟಿಯಿಂದ ಶೀಘ್ರವೇ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ಈಜುಕೊಳವನ್ನು ಪುನರಾಂಭಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಭರವಸೆ ನೀಡಿದರು.

ಅವರು, ಇಂದು ನಗರದ ಎಂಸಿಸಿ ಬಿ ಬ್ಲಾಕ್ ನಲ್ಲಿನ ಈಜುಕೊಳಕ್ಕೆ ಭೇಟಿ ನೀಡಿದ ರಾಜ್ಯ ಈಜು ಸಂಸ್ಥೆಯ ಕಾರ್ಯದರ್ಶಿ ಮತ್ತು ಅಂತರ ರಾಷ್ಟ್ರೀಯ ಈಜುಪಟು, ಅರ್ಜುನ್ ಪ್ರಶಸ್ತಿ ಪುರಸ್ಕೃತ ಒಲಂಪಿಯನ್ ಶರತ್ ಎಂ. ಗಾಯಕ್ ವಾಡ್ ಅವರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದರು.

ಕೋವಿಡ್ ಕಾರಣ ಕಳೆದ ಮೂರು ವರ್ಷಗಳಿಂದ ಸ್ಥಗಿತಗೊಂಡಿರುವ ನಗರದ ಎಂಸಿಸಿ ಬಿ ಬ್ಲಾಕ್‌ನಲ್ಲಿರುವ ನಗರ ಪಾಲಿಕೆಯ ಈಜು ಕೊಳವನ್ನು ಶೀಘ್ರದಲ್ಲೇ ಪುನರಾರಂಭಿಸುವಂತೆ ಪಾಲಿಕೆ ಆಯುಕ್ತರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು.

ಇದಕ್ಕೂ ಮುನ್ನ ಈಜಕೊಳ ವೀಕ್ಷಿಸಿದ ಶರತ್ ಎಂ. ಗಾಯಕ್ ವಾಡ್ ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ ಮೂರು ವರ್ಷಗಳಿಂದ ಸ್ಥಗಿತಗೊಂಡಿರುವ ಈಜಕೊಳವನ್ನು ವೀಕ್ಷಿಸಿದ ಶರತ್ ಈಜುಕೊಳ ಉಪಯೋಗಕ್ಕೆ ಬಾರದಂತಾಗಿರುವುದಕ್ಕೆ ಬೇಸರ ವ್ಯಕ್ತಪಡಿಸಿದರು. ಕಳೆದ ವಾರ ಬೆಳಗಾವಿಯಲ್ಲಿ ನಡೆದ ರಾಜ್ಯ ಈಜು ಚಾಂಪಿಯನ್ ಶಿಪ್‌ಗೆ 10 ರಿಂದ 17 ವರ್ಷದ ಒಳಗಿನ 600 ಕೂ ಅಧಿಕ ಕ್ರೀಡಾಪಟುಗಳು ಭಾಗವಹಿಸಿದ್ದರು. ಆದರೆ (2ನೇ ಪುಟಕ್ಕೆ)

## ಪೋಕ್ಸೋ ಹೆಚ್ಚಳ: ಜಾಗೃತಿ ಅಗತ್ಯ

**ಅಹವಾಲು ವಿಚಾರಣೆ, ಸಂವಾದ ಕಾರ್ಯಕ್ರಮದಲ್ಲಿ ನ್ಯಾ.ಪ್ರವೀಣ್ ನಾಯ್ಕ್**



ದಾವಣಗೆರೆ, ಜೂ.1- ಇತ್ತೀಚೆಗೆ ಕಾರಾಗೃಹಕ್ಕೆ ತೆರಳಿದ್ದ ಸಂದರ್ಭದಲ್ಲಿ ಅಲ್ಲಿದ್ದ ಶೇ.40ರಷ್ಟು ಜನರು ಪೋಕ್ಸೋ ಕಾಯ್ದೆಯಡಿಯಲ್ಲಿದ್ದು ತಿಳಿದು ಬಂದಿತು. ಇದನ್ನು ನೋಡಿದರೆ, ಪೋಕ್ಸೋ ಪ್ರಕರಣಗಳು ಹೆಚ್ಚಿವೆ. ಇವುಗಳನ್ನು ತಡೆಯುವ ನಿಟ್ಟಿನಲ್ಲಿ ಜಾಗೃತಿ ಮೂಡಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾಗಿರುವ ನ್ಯಾಯಾಧೀಶರಾದ ಪ್ರವೀಣ್ ನಾಯ್ಕ್ ಹೇಳಿದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸ್ವಯಂ ಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಡಯಟ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಅಹವಾಲು ವಿಚಾರಣೆ ಹಾಗೂ ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನದಲ್ಲಿ ತಿಳಿಸಿರುವಂತೆ ಶಿಕ್ಷಣ ಹಾಗೂ ಇನ್ನಿತರೆ ಮೂಲಭೂತ ಸೌಲಭ್ಯಗಳು ಪ್ರತಿಯೊಬ್ಬ ಮಕ್ಕಳಿಗೂ ದೊರೆಯುವಂತೆ ಕಾರ್ಯನಿರ್ವಹಿಸಬೇಕು. ಇಂತಹ ಅಹವಾಲು ವಿಚಾರಣಾ ಹಾಗೂ ಸಂವಾದ ಕಾರ್ಯಕ್ರಮಗಳನ್ನು ಏರ್ಪಡಿಸುವುದರಿಂದ ಮಕ್ಕಳ ಸಮಸ್ಯೆಗಳನ್ನು ಚರ್ಚಿಸಿ ಸೂಕ್ತ ಪರಿಹಾರ ದೊರಕಿಸಲು ಸಾಧ್ಯವಾಗುತ್ತದೆ. ನಾಮಕಾವಸ್ಥೆಗೆ ಕಾರ್ಯಕ್ರಮ ಆಯೋಜನೆ ಮಾಡದೆ (2ನೇ ಪುಟಕ್ಕೆ)


**ಹೃತ್ಪೂರ್ವಕ ಅಭಿನಂದನೆಗಳು**



ನೇರ್ಲಿಗೆ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವ ಗಂಗನಕಟ್ಟೆ ವಾರ್ಡಿನ
ಶ್ರೀಮತಿ ಸುಮಂಗಳಮ್ಮ ಮಲ್ಲಿಕಾರ್ಜುನ
ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.



ಪತಿ: ಮಲ್ಲಿಕಾರ್ಜುನ್ ಎಸ್.
ಮಕ್ಕಳಾದ: ಚೇತನ್ ಜಿ.ಎಂ.
ಸುನೀಲ್ ಜಿ.ಎಂ.
ಸುಪ್ರೀತ್ ಜಿ.ಎಂ.

ಕತ್ಲೋರ ವಂಶಸ್ಥರು, ಗಂಗನಕಟ್ಟೆ



**ಜನ್ಮದಿನದ ಶುಭಾಶಯಗಳು**

ದಾವಣಗೆರೆ ಮಹಾನಗರ ಪಾಲಿಕೆ
ಮಾಜಿ ಸದಸ್ಯರೂ, ನಮ್ಮ ಆತ್ಮೀಯರೂ ಆದ
ಶ್ರೀ ಎನ್. ಸುರೇಶ್ ಶಾಮನೂರು
ಅವರಿಗೆ 48ನೇ ಹುಟ್ಟುಹಬ್ಬದ ಶುಭಾಶಯಗಳು.

* ಗಿರಿಯಜ್ಜಿ ಶ್ರೀನಿವಾಸ್ ಮತ್ತು ಸಹೋದರರು
* ಜಿ. ಪರಮೇಶ್ವರಪ್ಪ ಮತ್ತು ಸಹೋದರರು
* ಎಸ್. ಸಿದ್ದಪ್ಪ ಮತ್ತು ಸಹೋದರರು
* ಇಂಚಘಟ್ಟದ ಅಂಜಿನಪ್ಪ, ಶಾಮನೂರು.
* ಕೆ. ಶರಣಪ್ಪ * ಕೆ.ಮೌನೇಶ್, ಶಾಮನೂರು.
* ನವೀನ್ * ಮನು, ನಾಗನೂರು
* ನಾಗರಾಜ್, ನಾಗಮ್ಮ ಕೇಶವಮೂರ್ತಿ ಬಡಾವಣೆ

ಎಸ್.ಎಸ್. ಮಲ್ಲಿಕಾರ್ಜುನ್ ಅಭಿಮಾನಿಗಳ ಬಳಗ, ಶಾಮನೂರು.

**ಜನ್ಮದಿನದ ಶುಭಾಶಯಗಳು**



ಇಂದು ಹುಟ್ಟುಹಬ್ಬದ ಸಂಭ್ರಮದಲ್ಲಿರುವ
ದಾವಣಗೆರೆ ಜಿಲ್ಲಾ ಬಿಜೆಪಿ ಅಧ್ಯಕ್ಷರು
ಮತ್ತು ಆತ್ಮೀಯರೂ ಆದ
ಶ್ರೀ ಎಸ್.ಎಂ. ವೀರೇಶ್ ಹನಗವಾಡಿ
ಅವರಿಗೆ ಹಾರ್ದಿಕ ಶುಭಾಶಯಗಳು.

♦ ಬೇತೂರು ಮರಡಿ ರೇವಣಸಿದ್ದಪ್ಪ ಮತ್ತು ಮಕ್ಕಳು
♦ ಕಂಸಾಗರ ಪಂಚಾಕ್ಷರಪ್ಪ ಮತ್ತು ಮಕ್ಕಳು
♦ ಬುಳ್ಳಾಪುರ ಮಲ್ಲಿಕಾರ್ಜುನ ಸ್ವಾಮಿ
♦ ಕೆ. ರಾಜಗೋಪಾಲ ರೆಡ್ಡಿ
♦ ಕೆ.ಜಿ.ಕೆ. ರಾಜಣ್ಣ ♦ ಬಾತಿ ಸದಾನಂದ್
♦ ಡಾ. ಮಹೇಶ್ವರಪ್ಪ ಬಾಡ
♦ ಆನೆಕೊಂಡದ ಪರಮೇಶ್ವರಪ್ಪ
♦ ಆನೆಕೊಂಡ ನಾಗರಾಜ್, ಪ್ರಿನ್ಸಿಪಾಲ್
♦ ಬುಳ್ಳಾಪುರ ವೀರಣ್ಣ
♦ ಮಳಲ್ಕೆರೆ ಮಹೇಶ್ವರಯ್ಯ
♦ ಗಂಗನಕಟ್ಟೆ ಲೋಕಣ್ಣ ♦ ಕೆ. ಜಾವೀದ್ ಸಾಬ್
♦ ಕುಳೇನೂರು ವಿಶ್ವಣ್ಣ ♦ ಶಾಮನೂರು ಬಸವರಾಜಪ್ಪ
♦ ಅಣಬೇರು ಮಂಜಣ್ಣ ♦ ಬೂದಾಳ್ ಶಿವಕುಮಾರ್
♦ ಬಿ.ಎನ್.ಟಿ. ಸದಣ್ಣ ♦ ರಾಮಗೊಂಡನಹಳ್ಳಿ ಜಯಣ್ಣ
♦ ಆನೆಕೊಂಡ ಶಂಕ್ರಪ್ಪ
♦ ಶ್ರೀನಿವಾಸ್ ಬಾಬು, ಉಬ್ರಾಣಿ ಕ್ಲಾತ್ ಕಂಪನಿ.
♦ ಬಿ. ವೀರೇಶ್ ಐ.ಐ.ಎಂ.ಎಸ್. ಪ್ರೈ. ಲಿ.

ಬೇತೂರು ಮರಡಿ ವಂಶಸ್ಥರು ಹಾಗೂ ವಾಯುವಿಹಾರ ಬಳಗ, ದಾವಣಗೆರೆ.

# ಮನುಷ್ಯನ ಕೆಟ್ಟ ಅಭ್ಯಾಸದಿಂದ ಆರೋಗ್ಯಕ್ಕೆ ಹಾನಿ

## ಹರಪನಹಳ್ಳಿ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾ. ಎಂ. ಭಾರತಿ



ಹರಪನಹಳ್ಳಿ, ಜೂ.1- ಮನುಷ್ಯನ ಕೆಟ್ಟ ಅಭ್ಯಾಸದಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಇಂತಹ ಆರೋಗ್ಯಕ್ಕೆ ಹಾನಿಯಾಗುವ ಮಾದಕ ವಸ್ತುಗಳನ್ನು ನಿಷೇಧಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದ ವೃತ್ತದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹರಪನಹಳ್ಳಿ , ಆರೋಗ್ಯ ಇಲಾಖೆ, ಬಂಗಿ ಬಸಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜ್, ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ, ಜಿಲ್ಲಾ ಸರ್ವೇಕ್ಷಣಾ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆ ಜನಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಸಿರು ನಿಶಾನೆ ತೋರಿಸುವ ಮೂಲಕ ಉದ್ಘಾಟಿಸಿದರು.

ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡುವುದಕ್ಕೆ ನಿಷೇಧವಿದೆ. ಧೂಮಪಾನದ ಹೊಗೆ ಶ್ವಾಸಕೋಶವನ್ನು ಸಂಪೂರ್ಣ ಹಾನಿ ಮಾಡುವ ಜೊತೆಗೆ, ಇತರೆ ಆರೋಗ್ಯ ಹಾಗೂ ಕ್ಯಾನ್ಸರ್‌ಕಾರಕ ಸಮಸ್ಯೆಗೆ ಕಾರಣವಾಗಲಿದೆ. ಇದು ಧೂಮಪಾನ ಸೇವನೆಯಿಂದ ಮಾತ್ರವಲ್ಲ ಆ ಹೊಗೆ ಕುಡಿಯುವ ಜನರ ಆರೋಗ್ಯದ ಮೇಲೂ ಈ ಪರಿಣಾಮ ಬೀರಲಿದೆ ಎಂದು ಸಾರ್ವಜನಿಕರಿಗೆ ತಿಳಿ ಹೇಳಿದರು.

ಈ ಸಂದರ್ಭದಲ್ಲಿ ಜ್ಞಾನಗಂಗೋತ್ರಿ ಬಿ.ಇಡಿ ಕಾಲೇಜ್‌ನಲ್ಲಿ ಸಹಾಯಕ ಅಭಿಯೋಜಕರಾದ ಎನ್. ಮೀನಾಕ್ಷಿ ಕಾರ್ಯಕ್ರಮ ಉದ್ಘಾಟಿಸಿದರು. ವಕೀಲರ ಸಂಘದ ಅಧ್ಯಕ್ಷ ಕೆ. ಜಗದಪ್ಪ, ಅಪರ ಸರ್ಕಾರಿ ವಕೀಲ ವಿ.ಜಿ.ಪ್ರಕಾಶ್ ಗೌಡ, ಉಪಾಧ್ಯಕ್ಷ ಡಿ.ಬಿ.ವಾಸುದೇವ, ಕಾರ್ಯದರ್ಶಿ ಎಸ್.ಜಿ.ತಿಪ್ಪೇಸ್ವಾಮಿ, ಜಂಟಿ ಕಾರ್ಯದರ್ಶಿ ಎಂ. ನಾಗೇಂದ್ರಪ್ಪ, ಎಂ ಮೃತ್ಯುಂಜಯ, ಬಾಗಳಿ ಮಂಜುನಾಥ್, ಎಂ. ಮಂಜುನಾಥ್, ಬಂಡ್ರಿ ಆನಂದ, ಕೆ. ಕೊಟ್ರೇಶ್, ವಾಮದೇವ, ಮುತ್ತಿಗಿ ರೇವಣ್ಣ, ಸಿ. ಹನುಮಂತಪ್ಪ, ಶಿವನಾಗ, ತಾಲೂಕು ವೈದ್ಯಾಧಿಕಾರಿ ಡಾ. ಹಾಲಸ್ವಾಮಿ, ಎಸ್.ಸಿ.ಎಸ್ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಆರ್. ನಾಗೇಂದ್ರರಾವ್, ಬಂಗಿ ಬಸಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಅರುಣಕುಮಾರ್, ಆರೋಗ್ಯ ಇಲಾಖೆಯ ಸಿಬ್ಬಂದಿಗಳಾದ ಭವನೇಶ್ವರಿ, ಗೌರಮ್ಮ, ಕೊಟ್ರೇಶ್, ಬಸವರಾಜ್ ಇತರರು ಉಪಸ್ಥಿತರಿದ್ದರು.

# ತಂಬಾಕು ಸೇವನೆಯಿಂದ ಹೆಚ್ಚುತ್ತಿರುವ ಸಾವಿನ ಸಂಖ್ಯೆ

## ಮಲೇಬೆನ್ನೂರು : ವಿಶ್ವ ತಂಬಾಕು ವಿರೋಧಿ ದಿನಾಚರಣೆಯಲ್ಲಿ ಡಾ. ಶ್ರೀನಿವಾಸ್ ಬೇಸರ

ಮಲೇಬೆನ್ನೂರು, ಜೂ. 1 - ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕರ ಎಂದು ಗೊತ್ತಿದ್ದರೂ ವೃದ್ಧರು, ಯುವಕರು ತಂಬಾಕು, ಗುಟ್ಕಾ, ಬೀಡಿ, ಸಿಗರೇಟ್ ಸೇವನೆ ಮಾತ್ರ ನಿಲ್ಲಿಸುತ್ತಿಲ್ಲ ಎಂದು ಮಕ್ಕಳ ತಜ್ಞ ಡಾ. ಶ್ರೀನಿವಾಸ್ ಬೇಸರ ವ್ಯಕ್ತಪಡಿಸಿದರು.



ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ನಿನ್ನೆ ಹಮ್ಮಿಕೊಂಡಿದ್ದ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಜಗತ್ತಿನಲ್ಲಿ ಚೈನಾ ನಂತರ ಭಾರತದಲ್ಲೇ ಅತಿ ಹೆಚ್ಚು ತಂಬಾಕು ಬಳಸಲಾಗುತ್ತಿದೆ. ತಂಬಾಕು, ಬೀಡಿ, ಸಿಗರೇಟ್, ಗುಟ್ಕಾ ಸೇವನೆಯಿಂದ ಕ್ಯಾನ್ಸರ್ ಸೇರಿದಂತೆ ಇತ್ಯಾದಿ ಕಾಯಿಲೆಗಳಿಂದ ನರಳಿ ಪ್ರತಿವರ್ಷ 80 ಲಕ್ಷ ಜನ ಸಾಯುತ್ತಿರುವ ಬಗ್ಗೆ ವರದಿಯಾಗಿದೆ. ದುಶ್ಚಟಗಳನ್ನು ಮಾಡುವ ಸಂದರ್ಭದಲ್ಲಿ ಆ ವ್ಯಕ್ತಿಯ ಜೊತೆಗೆ ದುಶ್ಚಟ ಮಾಡದ ವ್ಯಕ್ತಿ ಇದ್ದರೂ ಬೀಡಿ, ಸಿಗರೇಟ್ ಹೊಗೆಯಿಂದ ಆತನಿಗೆ ತೊಂದರೆ ಆಗಿರುವ ಉದಾಹರಣೆಗಳಿದ್ದು, ಯುವಕರು ಈ ಬಗ್ಗೆಯೂ ಜಾಗೃತರಾಗಬೇಕೆಂದು ಅವರು ಡಾ. ಶ್ರೀನಿವಾಸ್ ಕರೆನೀಡಿದರು.

ಮಲೇಬೆನ್ನೂರು ಪಿಎಸ್‌ಐ ಡಿ. ರವಿಕುಮಾರ್ ಮಾತನಾಡಿ, ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿದ್ದು, ಉತ್ತಮ ಆರೋಗ್ಯದ ಜೊತೆಗೆ ಉತ್ತಮ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕು. ಈ ನಿಟ್ಟಿನಲ್ಲಿ ದೊಡ್ಡ ಕನಸುಗಳನ್ನು ಕಾಣಬೇಕೆಂದು ಹುರಿದುಂಬಿಸಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿದ್ದ ನಿವೃತ್ತ ಶಿಕ್ಷಕ ರಾಮರಾಯ ಮಾತನಾಡಿ, ಆರೋಗ್ಯದ ಮೇಲೆ ಗಾಢ ಪರಿಣಾಮ ಬೀರುವ ತಂಬಾಕು, ಗುಟ್ಕಾದಿಂದ ವಿದ್ಯಾರ್ಥಿಗಳು ದೂರ ಇರದಿದ್ದರೆ ಮುಂದೊಂದು ದಿನ ನರಳಬೇಕಾಗುತ್ತದೆ. ನಿಮ್ಮಿಂದಾಗಿ ತಂದೆ-ತಾಯಿ, ಗುರುಗಳು ಖುಷಿ ಪಡುವಂತೆ ನೀವು ಬೆಳೆಯಬೇಕು. ಕೆಲವು ಪೋಷಕರು ಮಕ್ಕಳಿಂದಲೇ ತಂಬಾಕು, ಗುಟ್ಕಾ, ಬೀಡಿ, ಸಿಗರೇಟ್‌ಗಳನ್ನು ಅಂಗಡಿಯಿಂದ ತರಿಸಿಕೊಳ್ಳುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ನೂತನ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ನಾಗನಾಳ್ ಮಾತನಾಡಿ, ವಿದ್ಯಾರ್ಥಿಗಳು, ಯುವಕರು ಮೊಬೈಲ್ ಬದಲಿಗೆ ಪುಸ್ತಕಗಳನ್ನು ಕೈಯಲ್ಲಿಟ್ಟುಕೊಂಡರೆ ಬದುಕಿನಲ್ಲಿ ಬದಲಾವಣೆ ಕಾಣಬಹುದೆಂದರು.

ಪ್ರೌಢಶಾಲೆಯ ಹಿರಿಯ ಶಿಕ್ಷಕ ರಾಮಪ್ಪ ಸೋಮಣ್ಣನವರ್ ಅಧ್ಯಕ್ಷತೆ ವಹಿಸಿದ್ದರು. ಪ್ರೊಬೇಷನರಿ ಪಿಎಸ್.ಐ. ಶ್ರೀಪತಿ, ಇಂಗ್ಲಿಷ್ ಶಿಕ್ಷಕ ಸುರೇಶ್, ಪತ್ರಕರ್ತ ಜಿಗಳಿ ಪ್ರಕಾಶ್ ಭಾಗವಹಿಸಿದ್ದರು.

ಯೋಜನೆಯ ಯೋಜನಾಧಿಕಾರಿ ವಸಂತ ದೇವಾಡಿಗ ಪ್ರಾಸ್ತಾವಿಕವಾಗಿ ಮಾತನಾಡಿದರು.ಜ್ಞಾನ ವಿಕಾಸ ಸಮನ್ವಯಾಧಿಕಾರಿ ರಕ್ಷಿತಾ ಸ್ವಾಗತಿಸಿದರು. ಮಲೇಬೆನ್ನೂರು ವಲಯ ಮೇಲ್ವಿಚಾರಕಿ ಶ್ರೀಮತಿ ಸಂಪತ್‌ಲಕ್ಷ್ಮಿ ನಿರೂಪಿಸಿದರೆ, ಸೇವಾ ಪ್ರತಿನಿಧಿ ಮಂಜುಳಾ ವಂದಿಸಿದರು.

# ಈಜುಕೊಳ ಶೀಘ್ರದಲ್ಲೇ ಆರಂಭ

**(1ನೇ ಪುಟದಿಂದ)** ದಾವಣಗೆರೆಯಿಂದ ಯಾವ ಕ್ರೀಡಾಪಟು ಬಂದಿರಲಿಲ್ಲ. ಇದಕ್ಕೆ ಕಾರಣ ಕೇಳಿದಾಗ ಇಲ್ಲಿನ ಈಜುಕೊಳದ ಸ್ಥಿತಿಯ ಬಗ್ಗೆ ತಿಳಿಯಿತು. ರಾಜ್ಯದಲ್ಲಿ ಈಜು ಕ್ರೀಡೆಗೆ ಉತ್ತಮ ಭವಿಷ್ಯವಿದೆ. ಈಜು ಕ್ರೀಡೆಯಲ್ಲಿ 27 ವರ್ಷದಲ್ಲಿ ಕರ್ನಾಟಕವೇ ರಾಷ್ಟ್ರಮಟ್ಟದ ಚಾಂಪಿಯನ್ ಆಗಿದೆ. ಇಡೀ ದೇಶದಿಂದಲೇ ಬೆಂಗಳೂರಿಗೆ ಬಂದು ತರಬೇತಿ ಪಡೆಯುತ್ತಾರೆ. ಬೆಂಗಳೂರಿನಲ್ಲಿ ಅಷ್ಟೊಂದು ಉತ್ತಮ ಗುಣಮಟ್ಟದ ತರಬೇತಿ ದೊರೆಯುತ್ತಿರುವುದು ಸಂತೋಷದ ವಿಚಾರ ಎಂದು ಹೇಳಿದರು.

ಅನೇಕ ಕ್ರೀಡಾಪಟುಗಳು ತಮ್ಮ ರಾಜ್ಯಗಳನ್ನು ಪ್ರತಿನಿಧಿಸಿದರೂ ಕೂಡ ತರಬೇತಿಯನ್ನು ಬೆಂಗಳೂರಿನಲ್ಲಿ ಪಡೆಯುತ್ತಾರೆ. ಅಲ್ಲಿ ಸೌಲಭ್ಯಗಳು ಮತ್ತು ಸಾಕಷ್ಟು ಅವಕಾಶಗಳು ಇವೆ. ರಾಷ್ಟ್ರ ಮಟ್ಟದ ಪದಕಕ್ಕೆ ಸ್ಕಾಲರ್ ಶಿಪ್, ಶಾಲಾ ಶುಲ್ಕ, ಇಂಜಿನಿಯರಿಂಗ್, ಮೆಡಿಕಲ್, ಬ್ಯಾಚುಲರ್ ಡಿಗ್ರಿಗೆ ಹೋದರೆ ಶುಲ್ಕದಲ್ಲಿ ರಿಯಾಯಿತಿ ಸಿಗುತ್ತದೆ. ಶುಲ್ಕ ರಿಯಾಯಿತಿ, ಸ್ಕಾಲರ್ ಶಿಪ್ ಸಿಗುತ್ತದೆ. ವೈದ್ಯರು ಶಿಫಾರಸ್ಸು ಮಾಡುವ ಮೊದಲ ಕ್ರೀಡೆ ಈಜು ಎಂದರು.

ಬೆಂಗಳೂರು ಹೊರತುಪಡಿಸಿದರೆ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಈಜುಕೊಳ ಮತ್ತು ಈಜು ಪಟುಗಳ ಸಂಖ್ಯೆ ಕಡಿಮೆ ಇದೆ. ಕ್ರೀಡಾ ಸಂಸ್ಕೃತಿ ಬೆಂಗಳೂರಿನಲ್ಲೇ ಹೆಚ್ಚು, ಇಲ್ಲಿ ಚಿಕ್ಕ ಮಕ್ಕಳಿದ್ದಾಗಲೇ ಕ್ರೀಡೆಗೆ ಪ್ರೋತ್ಸಾಹ ಇರುತ್ತದೆ. ಆದರೆ ಬಹುತೇಕ ಮಂದಿ 9ನೇ ತರಗತಿಗೆ ಬಂದರೆ ಕ್ರೀಡಾ ಚಟುವಟಿಕೆಗಳನ್ನು ನಿಲ್ಲಿಸುತ್ತಾರೆ. ಈ ಪದ್ಧತಿ ಬೆಂಗಳೂರಿನಲ್ಲಿ ಅಷ್ಟಾಗಿ ಇಲ್ಲವಾದರೂ. ರಾಜ್ಯದ ಇತರೆ ಜಿಲ್ಲೆಗಳಲ್ಲಿ ತುಂಬಾ ಇದೆ. ಮಕ್ಕಳು ಓದಲಿ ಎನ್ನುವುದು ಪೋಷಕರ ಆಸೆಯಾಗಿರುತ್ತದೆ. ಆದರೆ ಪೋಷಕರು ತಮ್ಮ ಮಕ್ಕಳ ಕ್ರೀಡೆಗೆ ಪ್ರೋತ್ಸಾಹಿಸಬೇಕು. 14-15 ವರ್ಷ ಆದರೆ ಎಸ್ಸೆಸ್ಸೆಲ್ಸಿ, ಇದಕ್ಕೆ ಸಾಕಷ್ಟು ಓದಬೇಕು ಎನ್ನುತ್ತಾರೆ. ಆದರೆ 10ನೇ ತರಗತಿ ಮುಗಿಸಿ ಬಂದರೆ ಮಕ್ಕಳು ದೈಹಿಕವಾಗಿ ಫಿಟ್ ಆಗಿರುವುದಿಲ್ಲ ಎಂದರು.

ಕ್ರೀಡೆಗಳಿಗೆ ಮಕ್ಕಳು ಫಿಟ್ ಆಗಿರಬೇಕು. ಆದರೆ ಲಾಕ್‌ಡೌನ್ ಆದಾಗಿನಿಂದ ಮಕ್ಕಳಲ್ಲಿ ದೈಹಿಕ ಸದೃಢತೆಯೆ ತೀವ್ರ ಸಮಸ್ಯೆ ಕಾಣುತ್ತಿದೆ. ಅದರಿಂದ ವಾಪಾಸ್ ಬರಲು ಕಷ್ಟವಾಗಿದೆ. ಬೆಂಗಳೂರನ್ನು ಹೊರತುಪಡಿಸಿ ಈ ಸಮಸ್ಯೆ ಇತರೆ ಜಿಲ್ಲೆಗಳಲ್ಲಿ ಹೆಚ್ಚು ಕಂಡು ಬರುತ್ತಿದೆ. ಇನ್ನು ಅಂಡರ್ ಡೆವಲಪ್ ಸಿಟಿಗಳಲ್ಲಿ ಮಕ್ಕಳನ್ನು ಕ್ರೀಡೆಗಳಿಗೆ ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.

ದಾವಣಗೆರೆಯಲ್ಲಿ ಎರಡು ಈಜುಕೊಳಗಳಿವೆ. ಮೈಸೂರು, ಮಂಗಳೂರಿನಲ್ಲಿ 3-4, ಬೆಳಗಾವಿಯಲ್ಲಿ 4-5 ಇವೆ. ಆದರೆ ಸರ್ಕಾರದಿಂದ ಇವುಗಳ ವ್ಯವಸ್ಥಿತ ನಿರ್ವಹಣೆ ಆಗುತ್ತಿಲ್ಲ. ಖಾಸಗಿಗೆ ವಹಿಸಿದರೂ ಲಾಸ್ ಆಗಿ ಅರ್ಧಕ್ಕೆ ಬಿಟ್ಟು ಹೋಗುತ್ತಿದ್ದಾರೆ. ಕ್ರೀಡಾ ಇಲಾಖೆ ಮತ್ತು ರಾಜ್ಯ ಸರ್ಕಾರ ಯಾವುದೇ ಕಾರ್ಯಕ್ರಮ ತರಲಿ. ದಾವಣಗೆರೆಯ ಈಜುಕೊಳದ ದುರಸ್ತಿ ಕಾರ್ಯ ನಡೆದಿದೆ. ಅಧಿಕಾರಿಗಳೊಂದಿಗೆ ಚರ್ಚಿಸಲು ಮತ್ತು ಆರಂಭ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಇಲ್ಲಿನ ಜಿಲ್ಲಾಧಿಕಾರಿಗಳು, ನಗರ ಪಾಲಿಕೆ ಆಯುಕ್ತರು ಮತ್ತು ಕ್ರೀಡಾ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಅಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, ಗಂಜೀ ರಾಮಚಂದ್ರ, ತಿಪ್ಪೇಸ್ವಾಮಿ, ಅಂತರ ರಾಷ್ಟ್ರೀಯ ಕ್ರೀಡಾಪಟುಗಳಾದ ರೇವತಿ ನಾಯಕ, ನಕ್ಷತ್ರ ನಾಯಕ, ಲಕ್ಷ್ಮಣ, ವೆಂಕಟೇಶ್, ಕೆ.ಎನ್.ವೆಂಕಟೇಶ್, ಸಿದ್ದಯ್ಯನ ಕೋಟೆ ಪ್ರಭು, ಕ್ರೀಡಾ ಇಲಾಖೆ ಉಪನಿರ್ದೇಶಕಿ ಸುಜೇತನಾ ನಾಯ್ಕ, ತಿಪ್ಪೇಸ್ವಾಮಿ, ಬಾಷಾ ಇತರರು ಇದ್ದರು.

# ಹೊನ್ನಾಳಿ ಕಸಬಾಕ್ಕೆ ಹನುಮಂತಪ್ಪ ಜೆಸಿಬಿ ಪುಟ್ಟರಾಜ್



ಹೊನ್ನಾಳಿ, ಜೂ. 1 - ಪಟ್ಟಣದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಜೆಸಿಬಿ ಹನುಮಂತಪ್ಪ, ಉಪಾಧ್ಯಕ್ಷರಾಗಿ ಚಾಟಿ ಪುಟ್ಟರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಬಿ.ಎಲ್.ಕುಮಾರಸ್ವಾಮಿ, ಎಂ.ಸುರೇಶ್, ಹೆಚ್.ಡಿ. ಜಿನದತ್ತ, ಡಿ.ಆರ್.ಶಿವಶಂಕರಪ್ಪ, ಕತ್ತಿಗೆ ನಾಗರಾಜ, ರಾಣಿ, ಸರೋಜ, ಎಂ.ಚಂದ್ರಪ್ಪ, ಹೆಚ್.ಸಿ.ಪ್ರಕಾಶ್, ಈಶ್ವರನಾಯ್ಕ, ಎ.ಲೋಕೇಶ್, ಕಾರ್ಯದರ್ಶಿ ಸಿ.ರವಿ ಸಿಬ್ಬಂದಿಗಳಾದ ಸುರೇಶ್, ಪ್ರವೀಣ, ಜಿ.ಎನ್.ಸರೇಶ್ ಇದ್ದರು. ತಾಲ್ಲೂಕು ಬಿಜೆಪಿ ಪಕ್ಷದ ಅಧ್ಯಕ್ಷ ಜೆ.ಕೆ. ಸುರೇಶ್, ಕಾರ್ಯದರ್ಶಿ ನಾಗರಾಜ್ ಇದ್ದರು.

# ಪೋಕ್ಸೋ ಪ್ರಕರಣ ಹೆಚ್ಚಳ: ಜಾಗೃತಿ ಅಗತ್ಯ

**(1ನೇ ಪುಟದಿಂದ)** ಸಮಾಜದಲ್ಲಿ ಬದಲಾವಣೆ ತರುವ ಉದ್ದೇಶದಿಂದ ನಡೆಸಿದರೆ ಸಾರ್ಥಕತೆ ದೊರೆಯುತ್ತದೆ ಎಂದು ಹೇಳಿದರು.

ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ವೈ. ರಾಮಾನಾಯ್ಕ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿ ಹಾಸ್ಟೆಲ್ ಸೌಲಭ್ಯ ಬೇಕು ಎಂದು ಕೇಳಿಕೊಂಡು ಬಂದರೆ ಆ ಸೌಲಭ್ಯವನ್ನು ಒದಗಿಸಲಾಗುತ್ತದೆ. ಈ ನಿಟ್ಟಿನಲ್ಲಿ ಮಕ್ಕಳ ಕಲ್ಯಾಣ ಸಮಿತಿ ಪ್ರತಿದಿನ 10-15 ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಒದಗಿಸುವ ಕೆಲಸ ಮಾಡುತ್ತಿದೆ ಎಂದರು.

ಇನ್ನೂ ಮಕ್ಕಳನ್ನು ದತ್ತು ಪಡೆಯುವಾಗ ಸರ್ಕಾರದ ನೀತಿ, ನಿಯಮಗಳಂತೆ ಪಡೆಯಬೇಕಿದೆ. ಈ ಸಂಬಂಧ ಕಾಯ್ದೆ ಇದ್ದು, ಅದರಂತೆ ನಡೆದುಕೊಳ್ಳಬೇಕು. ಯಾರೋ ಮಕ್ಕಳು ಕೊಟ್ಟರೆ ಅಥವಾ ಅವರಿಂದ ಪಡೆದುಕೊಂಡರೆ ಅದು ಕಾನೂನು ಬಾಹಿರವಾಗುತ್ತದೆ ಎಂದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಡಿ. ಶಂಕರಪ್ಪ ಅಧ್ಯಕ್ಷತೆ ವಹಿಸಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಕೆ.ಹೆಚ್ ವಿಜಯ್‌ಕುಮಾರ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ತಿಪ್ಪೇಶಪ್ಪ, ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ರಾಮಾನಾಯ್ಕ್ ವೈ, ಪರಿಶಿಷ್ಟ ವರ್ಗಗಳ ಇಲಾಖೆ ಉಪನಿರ್ದೇಶಕ ಮಂಜನಾಯ್ಕ್, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಅಮಿತ್ ಬಿದರಿ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಕೌಸರ್ ರೇಷ್ಮಾ, ಜಿ.ಪಂ ಸಿಬ್ಬಂದಿ ಶಾರದ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಪೂರ್ಣಿಮಾ.ಎಂ ಸೇರಿದಂತೆ ಇತರರು ಹಾಜರಿದ್ದರು.

### ಸಂವಾದ ಕಾರ್ಯಕ್ರಮದಲ್ಲಿ ..

ನಾನು ಡಾನ್‌ಬಾಸ್ಕೋ ಸಂಸ್ಥೆಯಲ್ಲಿ ಕಲಿಯುತ್ತಿದ್ದೇನೆ. ತಂದೆ ಮರಣ ಹೊಂದಿದ್ದು ತಾಯಿಯೊಬ್ಬರೇ ಕುಟುಂಬ ಸಾಕುತ್ತಿದ್ದಾರೆ. ಪ್ರಸಕ್ತ ಸಾಲಿನಲ್ಲಿ ಮೊರಾರ್ಜಿ ಶಾಲೆಗೆ ಪ್ರವೇಶ ಪಡೆಯಲು ಪರೀಕ್ಷೆ ಬರೆದಿದ್ದು, ಅದರಲ್ಲಿ ಕಡಿಮೆ ಅಂಕಗಳು ಬಂದಿವೆ. ಆದ್ದರಿಂದ ಮೊರಾರ್ಜಿ ವಸತಿ ಶಾಲೆಗೆ ದಾಖಲು ಮಾಡಲು ಸಹಾಯ ಮಾಡುವಂತೆ ಐದನೇ ತರಗತಿ ಓದುತ್ತಿರುವ ನಿಟುವಳ್ಳಿಯ ಅಜಯ್ ಸಂವಾದ ಕಾರ್ಯಕ್ರಮದಲ್ಲಿ ಮನವಿ ಮಾಡಿಕೊಂಡರು.

ಆಯೋಗದ ಸದಸ್ಯರು ಪ್ರತಿಕ್ರಿಯಿಸಿ ವಿದ್ಯಾರ್ಥಿಯ ಮನವಿಯನ್ನು ಗಂಭೀರವಾಗಿ ಪರಿಗಣಿಸಿ, ಸೂಕ್ತ ಪರಿಹಾರ ದೊರಕಿಸುವಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳಿಗೆ ಸೂಚಿಸಿದರು.

ಸರ್ಕಾರಿ ಬಾಲಕಿಯರ ಬಾಲ ಮಂದಿರದಲ್ಲಿನ ಬಾಲಕಿ ಮಾತನಾಡಿ, ನನಗೆ ತಾಯಿ-ತಂದೆ ಯಾರೂ ಇಲ್ಲ. ಸರ್ಕಾರಿ ಬಾಲ ಮಂದಿರದಲ್ಲಿದ್ದೇನೆ. ಅಲ್ಲಿ ಎಲ್ಲವೂ ಚೆನ್ನಾಗಿದೆ. ಆದರೆ, ನಾವು ಇರುವ ಸ್ಥಳದಿಂದ ಶಾಲೆ ದೂರ ಇದೆ. ನನ್ನನ್ನೂ ಸೇರಿದಂತೆ ನನ್ನ ಜೊತೆಯಲ್ಲಿರುವ ಗೆಳತಿಯರಿಗೆ ಅಲ್ಲಿಗೆ ನಡೆದುಕೊಂಡು ಹೋಗಲು ಕಷ್ಟವಾಗುತ್ತಿದೆ. ಸಂಜೆ ಬಂದಾಗ ಕಾಲು ನೋವು ಆಗುತ್ತದೆ. ವಾಹನದ ವ್ಯವಸ್ಥೆ ಕಲ್ಪಿಸುವಂತೆ ಮನವಿ ಮಾಡಿದರು. ಈ ವಿಚಾರವಾಗಿ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಚರ್ಚಿಸಿ ಕ್ರಮ ಜರುಗಿಸುವುದಾಗಿ ಡಿ.ಶಂಕರಪ್ಪ ಭರವಸೆ ನೀಡಿದರು.

ನಾನು ಇಲ್ಲಿ ಬಿಸಿಎಂ ಹಾಸ್ಟೆಲ್‌ನಲ್ಲಿದ್ದು ಓದುತ್ತಿದ್ದೇನೆ. ನಾವು ಬಡವರು, ನಮ್ಮ ತಂದೆ ನೀನು ಶಾಲೆಗೆ ಹೋಗಬೇಡ ; ಕೆಲಸಕ್ಕೆ ಹೋಗು ಎಂದು ಹೇಳಿ ಶಾಲೆ ಬಿಡಿಸಿದರು. ಆದರೆ, ನಾನು ಹೇಗೋ ಇಲ್ಲಿಗೆ ಬಂದು ಶಿಕ್ಷಣ ಪಡೆಯುತ್ತಿದ್ದೇನೆ. ನನ್ನ ಅಣ್ಣ, ತಾಯಿ ಮೂರು ಜನರು ದುಡಿಯುತ್ತಾರೆ. ನನ್ನ ತಂಗಿಗೂ ಇಲ್ಲಿ ಕರೆಸಿಕೊಂಡು ಶಿಕ್ಷಣ ಕೊಡಿಸುವಂತೆ ಎಂಟನೇ ತರಗತಿಯ ಬಾಲಕಿ ಅಧಿಕಾರಿಗಳಿಗೆ ಮನವಿ ಮಾಡಿದಳು. ವಿವಿಧ ಶಾಲೆ ಹಾಗೂ ವಸತಿ ನಿಲಯಗಳಿಂದ ಆಗಮಿಸಿದ್ದ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳ ಕುರಿತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಗಮನಕ್ಕೆ ತಂದು ಪರಿಹಾರ ದೊರಕಿಸುವಂತೆ ಮನವಿ ಮಾಡಿಕೊಂಡರು.

## ಅಸ್ತಮಾ ಕಾಯಿಲೆಗೆ ಉಚಿತ ಔಷಧಿ

ಚಿಕ್ಕಮಗಳೂರು, ಜೂ. 1 - ಇಲ್ಲಿನ ಶರ್ಮ ಆಯುರ್ವೇದ ಭಂಡಾರದಲ್ಲಿ ಅಸ್ತಮಾ ರೋಗಿಗಳಿಗೆ ಇದೇ ದಿನಾಂಕ 8ರ ಬುಧವಾರ ಮೃಗಶಿರ ನಕ್ಷತ್ರದಲ್ಲಿ ಉಚಿತವಾಗಿ ಔಷಧಿ ಕೊಡಲಾಗುವುದು. ಔಷಧಿ ಪಡೆಯಲು ಹೆಸರುಗಳನ್ನು ನೋಂದಾಯಿಸಲು ಜೂನ್ 3 ಕೊನೆಯ ದಿನವಾಗಿದೆ. ವಿವರಕ್ಕೆ ಸಂಪರ್ಕಿಸಿ: ವಿನೋದ್ ಶರ್ಮ-(9844016766).

# ಎರಡು ಮದ್ಯದಂಗಡಿಗಳ ಪರವಾನಗಿ ಅಮಾನತ್ತು




ಹರಿಹರ, ಜೂ. 1 - ಅಬಕಾರಿ ಅಧಿಕಾರಿಗಳು ನೀಡುವ ಎಚ್ಚರಿಕೆ ಮೀರಿ ಪದೇ ಪದೇ ಸನ್ನದುದಾರರು, ಸನ್ನದು ಷರತ್ತುಗಳನ್ನು ಉಲ್ಲಂಘಿಸಿದ ಮೇರೆಗೆ ಎರಡು ಮದ್ಯದಂಗಡಿಗಳ ಪರವಾನಿಗೆಯನ್ನು ಮುಂದಿನ ಆದೇಶದವರೆಗೆ ಅಮಾನತ್ತುಗೊಳಿಸಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಆದೇಶ ಹೊರಡಿಸಿದ್ದಾರೆ.

ಹೊನ್ನಾಳಿಯ ಹೆಚ್.ಇ.ಮೈನುದ್ದೀನ್ ಪಾಷ ಇವರ ಒಡೆತನದ ಸುಗಂಧ ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ಹರಿಹರ ತಾಲ್ಲೂಕಿನ ಹನಗವಾಡಿ ಗ್ರಾಮದ (ಬೈಪಾಸ್ ಬಳಿಯ) ಕೃಷ್ಣ ಸಾ ಭೂತೆ ಒಡೆತನದ ರಾಘವೇಂದ್ರ ಬಾರ್ ಅಂಡ್ ರೆಸ್ಟೋರೆಂಟ್ ಅಮಾನತ್ತಾದ ಮದ್ಯದ ಅಂಗಡಿಗಳು.

ಪ್ರಸ್ತುತ ಅಬಕಾರಿ ವರ್ಷದಲ್ಲಿ ಪರವಾನಿಗೆ ಷರತ್ತುಗಳನ್ನು ಉಲ್ಲಂಘಿಸಿದ ಮೇರೆಗೆ ಮೇಲಿನ ಪ್ರತಿ ಬಾರ್ ಮೇಲೆ ಮೂರು ಪ್ರಕರಣಗಳು ದಾಖಲಾಗಿರುತ್ತವೆ. ಈ ಸಂದರ್ಭದಲ್ಲಿ ಹರಿಹರ ಅಬಕಾರಿ ಅಧಿಕಾರಿ ಶೀಲಾ ಇತರರು ಹಾಜರಿದ್ದರು.

## ರಸ್ತೆ ಯಾವುದಯ್ಯಾ ಗಾಜಿನ ಮನೆಗೆ ?



ದಾವಣಗೆರೆ, ಜೂ.1- ಗ್ಲಾಸ್ ಹೌಸ್ ರಸ್ತೆ ನಿರ್ಮಾಣದಿಂದಾಗಿ ಗ್ಲಾಸ್ ಹೌಸ್ ಬಳಿಯ ಎಲ್ಲಾ ಉಪ ರಸ್ತೆಗಳು ಭಾರೀ ವಾಹನಗಳ ರಭಸಕ್ಕೆ ಹಾಳಾಗಿವೆ. ಬೈಕು ಹಾಗೂ ಕಾರುಗಳು ಸೇರಿದಂತೆ ವಾಹನ ಸವಾರರು ಪರದಾಡಬೇಕಾಗಿದೆ. ಕಾರೊಂದು ರಸ್ತೆಯಲ್ಲಿ ಸಿಕ್ಕಿ ಹಾಕಿಕೊಂಡಿರುವ ಚಿತ್ರವಿದು. ಸಂಬಂಧಪಟ್ಟವರು ಈ ಬಗ್ಗೆ ಗಮನ ಹರಿಸಬೇಕಿದೆ.

## ಡಾ. ಅರುಣ್‌ಚಂದ್ರ ಬೆಣ್ಣೆಹಳ್ಳಿ ನಿಧನ



ಮಲೇಬೆನ್ನೂರು ಪಟ್ಟಣದ ಖ್ಯಾತ ವೈದ್ಯರಾದ
ಡಾ. ಬಿ. ಚಂದ್ರಶೇಖರ್ ಮತ್ತು ಶ್ರೀಮತಿ ಜ್ಯೋತಿ ಅವರ ಪುತ್ರ
ಹಾಗೂ ಸಿ.ಜಿ. ಆಸ್ಪತ್ರೆಯ ಮೂತ್ರರೋಗ ಶಸ್ತ್ರ ಚಿಕಿತ್ಸೆ ತಜ್ಞರಾದ

**ಡಾ. ಅರುಣ್‌ಚಂದ್ರ ಬೆಣ್ಣೆಹಳ್ಳಿ** (37 ವರ್ಷ )

ಇವರು ದಿನಾಂಕ 01-06-2022 ರ ಬುಧವಾರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆಯಲ್ಲಿರುವ ಮನೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತಂದೆ, ತಾಯಿ, ಪತ್ನಿ, ಓರ್ವ ಪುತ್ರಿ, ಸಹೋದರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 02.06.2022 ರ ಗುರುವಾರ ಮಧ್ಯಾಹ್ನ 1 ಗಂಟೆಗೆ ಮಲೇಬೆನ್ನೂರಿನಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ**
**ಬೆಣ್ಣೆಹಳ್ಳಿ ವಂಶಸ್ಥರು ಹಾಗೂ ಬಂಧು –ಮಿತ್ರರು**

## ಸರ್ಕಾರದ ಇ-ಮಾರ್ಕೆಟ್‌ಗೆ ಸಹಕಾರಿಗಳ ಸೇರ್ಪಡೆ

ನವದೆಹಲಿ, ಜೂ. 1 – ಸರ್ಕಾರದ ಇ-ಮಾರ್ಕೆಟ್ ವ್ಯಾಪ್ತಿಯನ್ನು ವಿಸ್ತರಿಸಿ ಸಹಕಾರಿಗಳೂ ಸಹ ಖರೀದಿಸಲು ಅವಕಾಶ ಮಾಡಿಕೊಡಲು ಕೇಂದ್ರ ಸಂಪುಟ ಅನುಮತಿ ನೀಡಿದೆ.

ಪ್ರಸಕ್ತ ಸಹಕಾರಿಗಳು ಖರೀದಿದಾರರಾಗಿ ಭಾಗವಹಿಸಲು ಸರ್ಕಾರಿ ಇ- ಮಾರ್ಕೆಟ್‌ನಲ್ಲಿ ಅವಕಾಶ ಇಲ್ಲ. ಕೇಂದ್ರ ಸರ್ಕಾರದ ಕ್ರಮದಿಂದ ದೇಶದ 8.54 ಲಕ್ಷ ಸಹಕಾರಿಗಳು ಹಾಗೂ ಅದರ 27 ಕೋಟಿ ಸದಸ್ಯರು ಸ್ಪರ್ಧಾತ್ಮಕವಾಗಿ ಉತ್ಪನ್ನ ಪಡೆಯಲು ಸಾಧ್ಯವಾಗಲಿದೆ.

## ಕೌಟುಂಬಿಕ ಕಲಹ: ಜಿಲ್ಲಾಸ್ಪತ್ರೆ ವೈದ್ಯ ಆತ್ಮಹತ್ಯೆ

**(1ನೇ ಪುಟದಿಂದ)** ಆಧಾರದ ಮೇಲೆ ಮೂತ್ರ ರೋಗ ಶಸ್ತ್ರ ಚಿಕಿತ್ಸಾ ತಜ್ಞರಾಗಿ ಸೇವೆಗೆ ಸೇರಿಕೊಂಡಿದ್ದರು. ಗೌರವ ಧನ ರೂಪದಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಎಲ್ಲರೊಂದಿಗೂ ಅನೋನ್ಯವಾಗಿದ್ದರು . ಆಸ್ಪತ್ರೆಗೆ ಬರುವ ರೋಗಿಗಳನ್ನು ಪ್ರೀತಿಯಿಂದಲೇ ಮಾತನಾಡಿಸಿ ಚಿಕಿತ್ಸೆ ನೀಡುತ್ತಿದ್ದರು. ಅವರೆಂದರೆ ಎಲ್ಲರಿಗೂ ಅಚ್ಚುಮೆಚ್ಚಾಗಿದ್ದರು. ಕಷ್ಟಪಟ್ಟು ಓದಿ ಎಂಬಿಬಿಎಸ್ ಎಂಎಸ್ ಮತ್ತು ಎಂಸಿಹೆಚ್ ಮಾಡಿ ವೈದ್ಯರಾಗಿದ್ದರು. ಹಲವು ವರ್ಷಗಳಿಂದಲೂ ವೈದ್ಯ ವೃತ್ತಿ ಮಾಡುತ್ತಿದ್ದರು.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಎಎಸ್ಪಿ ಬಸರಗಿ ಹಾಗೂ ವಿದ್ಯಾನಗರ ಪೊಲೀಸ್ ಠಾಣೆಯ ಪೊಲೀಸರು, ಎಫ್ ಎಸ್ ಎಲ್ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ.

ತಂದೆ, ತಾಯಿ, ಪತ್ನಿ ,ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಆಗಲಿರುವ ಡಾ. ಅರುಣ್ ಚಂದ್ರ ಅವರ ಅಂತ್ಯಕ್ರಿಯೆಯು ಗುರುವಾರ ಮಧ್ಯಾಹ್ನ 1 ಗಂಟೆಗೆ ಮಲೇಬೆನ್ನೂರಿನಲ್ಲಿ ನೆರವೇರಲಿದೆ, ಡಾ ಅರುಣ್ ಆತ್ಮಹತ್ಯೆ ಮಾಡಿಕೊಂಡಿರುವುದರಿಂದ ಚಿಗಟೇರಿ ಜಿಲ್ಲಾಸ್ಪತ್ರೆಯ ವೈದ್ಯರು, ಸಿಬ್ಬಂದಿಗಳು ಆತ್ಮಹತ್ಯೆ ಸುದ್ದಿ ಕೇಳಿ ದಿಗ್ಭ್ರಾತರಾಗಿದ್ದಾರೆ.

# ಶ್ರಮಜೀವಿಗಳ ಪರ ಕಮ್ಯುನಿಷ್ಟ್ ಹೋರಾಟ : ಶಾಸಕ ರಾಮಪ್ಪ ಶ್ಲಾಘನೆ

ಹರಿಹರ, ಜೂ. 1 - ಕಮ್ಯುನಿಷ್ಟ್ ಪಕ್ಷವು ಶಿಸ್ತಿನ ಪಕ್ಷವಾಗಿದ್ದು ಅಧಿಕಾರ ಇರಲಿ, ಇಲ್ಲದಿರಲಿ ಶ್ರಮಜೀವಿಗಳ ಪರವಾಗಿ ಹೋರಾಟ ಮತ್ತು ಚಳುವಳಿ ಮಾಡುತ್ತದೆ. ಇಂತಹ ಪಕ್ಷದಲ್ಲಿ ನಾನು ಸಹ ಕಾರ್ಮಿಕ ನಾಯಕನಾಗಿ ಸೇವೆ ಸಲ್ಲಿಸಿದ್ದು ಖುಷಿ ಇದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.



ನಗರದ ಕಮ್ಯುನಿಷ್ಟ್ ಪಕ್ಷದ ಕಚೇರಿ ಆವರಣದಲ್ಲಿ ಸಿಪಿಐ ಹಾಗೂ ಎಐಟಿಯುಸಿ ತಾಲ್ಲೂಕು ಮಂಡಳಿಯಿಂದ ಆಯೋಜನೆ ಮಾಡಿದ್ದ ಮೇ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು. ಕಾಮ್ರೇಡ್ ಪಂಪಾಪತಿಯವರು ಕಾರ್ಮಿಕ ನಾಯಕರಾಗಿ , ದಾವಣಗೆರೆ ನಗರಸಭೆಯ ಅಧ್ಯಕ್ಷರಾಗಿ, ಮೂರು ಬಾರಿ ಶಾಸಕರಾಗಿ ಕಾರ್ಮಿಕರ, ಜನಸಾಮಾನ್ಯರ, ದೀನ, ದಲಿತರ ಸೇವೆ ಸಲ್ಲಿಸಿದ್ದು, ಮರೆಯಲು ಸಾಧ್ಯವಿಲ್ಲ ಎಂದವರು ಹೇಳಿದರು.

ನಾನು ಸಹ ಕಾರ್ಮಿಕ ನಾಯಕನಾಗಿ ಹರಿಹರ ನಗರಸಭೆಯ ಅಧ್ಯಕ್ಷನಾಗಿ, ಶ್ರಮಜೀವಿಗಳ ಹಾಗೂ ಜನಸಾಮಾನ್ಯರ ಆಶೀರ್ವಾದದಿಂದ ಶಾಸಕನಾಗಿರುವುದು ಹೆಮ್ಮೆ ತಂದಿರುವ ವಿಚಾರವಾಗಿದೆ. ಈ ನಿಮ್ಮ ಪ್ರೀತಿ, ವಿಶ್ವಾಸ ನಿರಂತರವಾಗಿ ಹೀಗೆ ಇರಲಿ. ಎಲ್ಲಾ ಜನರ ಏಳಿಗೆಗೆ ಪ್ರಾಮಾಣಿಕ ಸೇವೆ ಸಲ್ಲಿಸುವೆ ಎಂದು ಹೇಳಿದರು.

ಬಂಡಾಯ ಸಾಹಿತಿ ಪ್ರೊ . ಸಿ.ವಿ. ಪಾಟೀಲ್ ಮಾತನಾಡುತ್ತಾ, ಹರಿಹರದ ಕಾರ್ಮಿಕ ಮುಖಂಡರು, ಕಾರ್ಮಿಕರಷ್ಟೇ ಇರದೇ ಸಾಹಿತಿಗಳನ್ನು, ಪ್ರಗತಿಪರ ಚಿಂತಕರನ್ನು ಒಳಗೊಂಡಂತೆ ಕಾರ್ಯಕ್ರಮ ರೂಪಿಸಿರುವುದು, ಮುಂದಿನ ಹೋರಾಟಗಳಿಗೆ ದಿಕ್ಸೂಚಿಯಾಗಿದೆ ಎಂದು ಆಶಯ ವ್ಯಕ್ತಪಡಿಸಿದರು.

ಜಿಲ್ಲಾ ಸಿ.ಪಿ.ಐ. ಮಂಡಳಿಯ ಸದಸ್ಯರು, ಪ್ರಗತಿಪರ ಲೇಖಕರಾದ ಷಣ್ಮುಖ ಸ್ವಾಮಿ ಮಾತನಾಡಿ, ಕೆಂಬಾವುಟ ಹುಟ್ಟಿದ್ದು ಸಾವಿರಾರು ಕಾರ್ಮಿಕರ ತ್ಯಾಗ, ಬಲಿದಾನದ ಪ್ರತಿಬಿಂಬ. ಮಾಲೀಕರ ದಬ್ಬಾಳಿಕೆ ಹಿಮ್ಮೆಟ್ಟಿಸಲು ಕೆಲಸದ ಸಮಯದ ಮಿತಿಗಾಗಿ 1886 ರಲ್ಲಿ ಅಮೆರಿಕಾದ ಚಿಕಾಗೋದಲ್ಲಿ ನಡೆದ ಭೀಕರ ಹೋರಾಟದಲ್ಲಿ ಮಡಿದ ಕಾರ್ಮಿಕ ಸಂಗಾತಿಗಳ ರಕ್ತದಲ್ಲಿ ಮಿಂದೆದ್ದು ಆಗಿದ್ದೇ ಕೆಂಬಾವುಟ ಎಂದರು.

ಇದೇ ವೇಳೆ ಪವಾಡಗಳ ಗುಟ್ಟು ಬಯಲು ಮಾಡುತ್ತಾ, ಜನರಲ್ಲಿ ವೈಚಾರಿಕ ವಿಷಯಗಳನ್ನು ತುಂಬುತ್ತಿರುವ ಕಾರ್ಮಿಕ ನಾಯಕರಾಗಿರುವ ಎ.ಹರಿ ಜಾದುಗಾರ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಕ್ರೀಡಾಪಟು ಹೆಚ್. ನಿಜಗುಣ, ಹರಿಹರ ತಾಲ್ಲೂಕು ಘಟಕದ ಕ.ಸಾ.ಪ. ಅಧ್ಯಕ್ಷ ಡಿ.ಎಂ.ಮಂಜುನಾಥಯ್ಯ, ಎಕ್ಕೆಗುಂದಿ ರುದ್ರೇಗೌಡ , ಸಿಪಿಐ ತಾಲ್ಲೂಕು ಘಟಕದ ಕಾರ್ಯದರ್ಶಿ ಟಿ.ಎಚ್. ನಾಗರಾಜ್, ಮೇ ದಿನಾಚರಣೆಯ ಮಹತ್ವದ ಬಗ್ಗೆ ಮಾತನಾಡಿದರು.

ಸಭೆ ಅಧ್ಯಕ್ಷತೆಯನ್ನು ಹೆಚ್.ಕೆ. ಕೊಟ್ರಪ್ಪ ವಹಿಸಿದ್ದರು.

ಈ ಸಂದರ್ಭದಲ್ಲಿ ಕಟ್ಟಡ ಕಾರ್ಮಿಕರ ಮುಖಂಡರಾದ ಭೀಮಪ್ಪ ಮಡಿವಾಳ , ಕಾರ್ಮಿಕ ಮುಖಂಡರುಗಳಾದ ಶಿವರಾಜ್ ಹಿತ್ತಲಮನೆ , ಕೃಷ್ಣ ಗೊಲ್ಲರ್, ಜಬಿ ಉಲ್ಲಾ , ನಾಗರಾಜ್ ಹಿತ್ತಲಮನೆ , ಎಸ್.ಎಸ್. ಮರಿಗೌಡ್ರು, ಬಿ.ಹೆಚ್. ಚಂದ್ರಪ್ಪ, ಸಿ. ಹೆಚ್. ಚೌಡಪ್ಪ, ನಾಗರಾಜ್ ಬಣಕಾರ್, ಕುಮಾರ್ ನಾಯಕ್, ಪರಮೇಶಪ್ಪ ಬಣಕಾರ್, ಇಬ್ರಾಹಿಂ ಸುನಾಲ್ಕರ್, ವೀರಣ್ಣ ಅಗಡಿ, ಗಂಗಾಧರ್ ಕೊಟಗಿ, ಮಂಜುನಾಥ ಅಗಡಿ, ಕ್ರೀಡಾಪಟುಗಳಾದ ಲೋಹಿತ್ ಕುಮಾರ್, ಜಿ. ಶಂಕರ್ ಮೂರ್ತಿ, ಸುರೇಶ್, ಸಾಹಿತ್ಯ ಕ್ಷೇತ್ರದಿಂದ ಬಿ.ಬಿ.ರೇವಣ್ಣ ನಾಯಕ್, ಈಶಪ್ಪ ಬೂದಿಹಾಳ, ನಾಗಭೂಷಣ್, ಎ.ಎನ್. ಸಿದ್ದೇಶ್ ಇತರರು ಉಪಸ್ಥಿತರಿದ್ದರು.

# ದುಶ್ಚಟಗಳಿಂದ ದೂರ ಇರುವಂತೆ ಕರೆ



ಹರಿಹರ ತಹಶೀಲ್ದಾರ್ ಎಂ.ಬಿ. ಅಶ್ವತ್ಥ್

ಹರಿಹರ, ಜೂ. 1 - ಮನುಷ್ಯ ಹೆಚ್ಚು ದಿನಗಳ ಕಾಲ ಸದೃಢ, ಆರೋಗ್ಯಕರ ಜೀವನ ನಡೆಸಬೇಕಾದರೆ ದುಶ್ಚಟಗಳಿಂದ ದೂರ ಇರಬೇಕು ಎಂದು ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಹೇಳಿದರು.

ಆರೋಗ್ಯ ಮತ್ತು ಕುಟುಂಬ ಇಲಾಖೆ ವತಿಯಿಂದ ತಂಬಾಕು ರಹಿತ ದಿನಾಚರಣೆ ಅಂಗವಾಗಿ ನಡೆದ ಆರೋಗ್ಯ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹಳೆಯ ಕಾಲದ ಆಹಾರದ ಗುಣಮಟ್ಟ ಹೆಚ್ಚಿನ ಪ್ರಮಾಣದಲ್ಲಿ ಇರುತ್ತಿತ್ತು. ಆ ಸಮಯದಲ್ಲಿ ಯಾವುದೇ ಬೆಳೆಗಳನ್ನು ಬೆಳೆಯುವ ಸಂದರ್ಭದಲ್ಲಿ ವಿವಿಧ ರೀತಿಯ ಸಗಣಿ ಗೊಬ್ಬರ ಹೆಚ್ಚು ಬಳಸುತ್ತಿದ್ದರು. ಆದರೆ ಕಾಲ ಕ್ರಮೇಣ ತಾಂತ್ರಿಕ ಯುಗ ಬಂದಾಗಿನಿಂದ ರಸಗೊಬ್ಬರ, ಕೀಟನಾಶಕ ಔಷಧಿ ಬಳಸುತ್ತಿರುವುದರಿಂದ ಮತ್ತು ಯಾವುದೇ ಅಡುಗೆ ಪದಾರ್ಥಗಳು ಸಿದ್ದತೆ ಮಾಡುವಾಗ ಮಸಾಲೆ ಪದಾರ್ಥಗಳನ್ನು ಹೆಚ್ಚಾಗಿ ಬಳಸುವುದರಿಂದ ಗುಣಮಟ್ಟದ ಆಹಾರ ಸೇವನೆಯ ಪ್ರಮಾಣವು ಕಡಿಮೆಯಾಗಿದೆ ಎಂದವರು ಹೇಳಿದರು.

ಇಂತಹ ಸಮಯದಲ್ಲಿ ಯುವಕರು ತಂಬಾಕು, ಸಿಗರೇಟ್, ಗುಟ್ಕಾ ಸೇವನೆ ಮಾಡಿ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಾರೆ. ಇದರಿಂದಾಗಿ ತಮ್ಮ ಆರೋಗ್ಯದಲ್ಲಿ ಏರು ಪೇರು ಆಗುವುದರ ಜೊತೆಗೆ ಕುಟುಂಬದ ಸದಸ್ಯರಿಗೆ ನೆಮ್ಮದಿ ಹಾಳಾಗುವಂತಹ ಸಂದರ್ಭವನ್ನು ಕಾಣುತ್ತೇವೆ. ಯುವಕರು ತಂಬಾಕು, ಸಿಗರೇಟ್, ಗುಟ್ಕಾ ಸೇವನೆ ಮಾಡದೆ ಆರೋಗ್ಯ ಸದೃಢವಾಗಿ ಇರುವಂತೆ ನೋಡಿಕೊಂಡು ಉತ್ತಮ ಜೀವನ ನಡೆಸುವಂತೆ ಹೇಳಿದರು.

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ಡಾ. ಕಾವ್ಯ, ಡಾ. ವಿಶ್ವನಾಥ್, ನಾಗರಾಜ್, ಉಮ್ಮಣ್ಣ, ಪಿ. ಸುಧಾ, ಉಮ್ಲನಾಯಕ್, ಶಶಿಕಾಂತ್, ದಾದಾಪೀರ್, ಮಹೇಶ್, ಶೀಲಾ, ನೇತ್ರಾ, ಕವಿತಾ, ರೇಖಾ ಮತ್ತಿತರಿದ್ದರು.

# ಬಸಾಪುರದಲ್ಲಿ ಅಂಗನವಾಡಿ ಕಟ್ಟಡಕ್ಕೆ ಭೂಮಿ ಪೂಜೆ



ದಾವಣಗೆರೆ, ಜೂ.1- ಮಹಾನಗರ ಪಾಲಿಕೆ ವ್ಯಾಪ್ತಿಯ ಬಸಾಪುರದಲ್ಲಿ ನೂತನ ಅಂಗನವಾಡಿ ಕಟ್ಟಡಕ್ಕೆ ಗುದ್ದಲಿ ಪೂಜೆ ಕಾರ್ಯಕ್ರಮ ನೆರವೇರಿಸಲಾಯಿತು.

ಶಾಸಕ ಡಾ. ಶಾಮನೂರು ಶಿವಶಂಕರಪ್ಪನವರ ಶಿಫಾರಸ್ಸಿನ ಮೇರೆಗೆ ಸ್ಮಾರ್ಟ್ ಸಿಟಿ ಯೋಜನೆಯಡಿ ನೂತನ ಅಂಗನವಾಡಿ ಕಟ್ಟಡಕ್ಕೆ ಅನುದಾನ ದೊರೆತಿದ್ದು, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಗಡಿ ಗುಡಾಳ್ ಮಂಜುನಾಥ್ ನೇತೃತ್ವದಲ್ಲಿ ಪಾಲಿಕೆ ಸದಸ್ಯರಾದ ಶಿವಲೀಲಾ ಕೊಟ್ರಯ್ಯ ನೂತನ ಕಟ್ಟಡಕ್ಕೆ ಗುದ್ದಲಿ ಪೂಜೆ ಕಾರ್ಯ ಮಾಡಿದರು.

ಈ ವಿಶೇಷ ಸಮಾರಂಭಕ್ಕೆ ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಬಾ.ಮ. ಬಸವರಾಜಯ್ಯ, ಮಾಜಿ ಉಪ ಮಹಾಪೌರ ಗೌಡ್ರ ರಾಜಶೇಖರ್, ಪಾಲಿಕೆ ನಾಮನಿರ್ದೇಶಿತ ಸದಸ್ಯ ಮರುಳಪ್ಪ,

ಗ್ರಾಮಸ್ಥರಾದ ಎಸ್.ಸುರೇಂದ್ರಪ್ಪ, ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಕೆ.ಎಲ್.ಹರೀಶ್, ಎಂ.ಎಸ್. ಕೊಟ್ರಯ್ಯ, ಸಿ. ಮಹೇಶ್ವರಪ್ಪ, ನಾಗೇಂದ್ರಚಾರ್, ಎನ್.ಎಂ. ಕೊಟ್ರಯ್ಯ, ಕೆ.ಬಿ. ಲಿಂಗರಾಜ್, ಬಿ.ಟಿ.ಮರುಳಸಿದ್ದಪ್ಪ, ವಿಜಯ್ ಕುಮಾರ್, ಮೌನೇಶಚಾರ್, ಬಾತಿ ಜೈರಾಜ್, ಪ್ರಕಾಶ್, ರೇವಣಸಿದ್ದಯ್ಯ, ಬಸವರಾಜಯ್ಯ, ಗಿರೀಶ್, ಅಕ್ಕಿ ರಾಜು, ಲೋಕೇಶ್ವರಯ್ಯ, ಕರಿಬಸಪ್ಪ, ಗಣೇಶ್, ಬಿಟಿ ಬಸವರಾಜ್, ಚೌಡಪ್ಪ, ವೀರೇಶ್, ತಿಪ್ಪೇಶ್, ನವೀನ್, ರಮೇಶ್, ಅಂಗನವಾಡಿ ಕಾರ್ಯಕರ್ತರು, ಸರ್ಕಾರಿ ಶಾಲಾ ಮುಖ್ಯ ಶಿಕ್ಷಕರು, ಸಿಬ್ಬಂದಿ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಕುರಿಗಾಹಿಗಳಿಗೆ ವಿಮಾ ಸೌಲಭ್ಯ

ದಾವಣಗೆರೆ, ಜೂ 1- ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ, ಕುರಿ/ಮೇಕೆ ಸಾಕಾಣಿಕೆದಾರರು/ವಲಸೆ ಕುರಿಗಾರರು ಆಕಸ್ಮಿಕ ಮರಣ ಹೊಂದಿದಲ್ಲಿ ಆರ್ಥಿಕ ಸಂಕಷ್ಟದಿಂದ ಪಾರು ಮಾಡಲು ಕುರಿಗಾಹಿಗಳು ಐದು ಲಕ್ಷ ರೂ.ಗಳ ವಿಮಾ ಸೌಲಭ್ಯ ಪಡೆಯಯಬಹುದು. ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ದಾವಣಗೆರೆ ಡಾ: ಶಿವಕುಮಾರ್ ಜಿ.ಎಸ್. 9353567572 ಸಂಪರ್ಕಿಸಿ.

# ಪಠ್ಯ ಮಾರ್ಪಾಟಿಗೆ ಸರ್ಕಾರ

(1ನೇ ಪುಟದಿಂದ) ಈ ಅವಹೇಳನಕಾರಿ ಹೇಳಿಕೆ ನನ್ನದಲ್ಲ ನನಗೆ ವಾಟ್ಸಾಪ್‌ನಲ್ಲಿ ಫಾರ್ವರ್ಡ್ ಬಂದಿತ್ತು ಎಂದು ಸಮರ್ಥನೆ ನೀಡಿದ್ದಾರೆ. ವಾಟ್ಸಾಪ್‌ನಲ್ಲಿ ಬಂದಿದ್ದನ್ನು ಪೋಸ್ಟ್ ಮಾಡಿದರೂ ಆ ವ್ಯಕ್ತಿಯ ವ್ಯಕ್ತಿತ್ವ ಎಂತಹದು ಎಂದು ಟೀಕಾಪ್ರಹಾರ ನಡೆದಿದೆ. ಬಸವಣ್ಣನ ಬಗ್ಗೆ ಮಾತನಾಡಿದ ಹಿನ್ನೆಲೆಯಲ್ಲಿ ಆ ಸಮಾಜದ ಸ್ವಾಮೀಜಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕುವೆಂಪು ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ನಿರ್ಮಲಾನಂದ ಶ್ರೀಗಳು ಮುಖ್ಯಮಂತ್ರಿಗಳಿಗೆ ಒತ್ತಾಯಿಸಿದ್ದಾರೆ. ಸಮಿತಿಯ ಅಧ್ಯಕ್ಷನ ಪರಿಸ್ಥಿತಿ ಹೀಗಾದರೆ ಸಮಿತಿ ಕತೆ ಏನು? ಎಂದು ಪ್ರಶ್ನಿಸಿದ್ದಾರೆ.

ಈ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿಯಲ್ಲಿ 9 ಸದಸ್ಯರಿದ್ದು, ಅದರಲ್ಲಿ 7 ಮಂದಿ ಒಂದೇ ಸಮುದಾಯಕ್ಕೆ ಸೇರಿದವರು. ರಾಜಾರಾಮ್ ಹೆಗಡೆ ಅಧ್ಯಕ್ಷರು, ಸತ್ಯಪ್ರಕಾಶ್- ವಿದ್ಯಾವರ್ಧಕ ಸಂಘ, ರಂಗನಾಥ್- ರಾಷ್ಟ್ರೋತ್ಥಾನ, ಬಿ.ಕೆ ವಾಸುಕಿ - ವಿದ್ಯಾಭವನ, ಅನಂತ ಕೃಷ್ಣ ಭಟ್- ವಿಶ್ವ ಹಿಂದೂ ಪರಿಷತ್ ಮುಖಂಡರು, ವಿಠಲ ಪೋತೆದಾರ್- ಎಮಿತಿಕ್ ಸೊಸೈಟಿ ಸದಸ್ಯರು. ಇವರೆಲ್ಲರೂ ಒಂದೇ ಕೋಮಿಗೆ ಸೇರಿದವರಾಗಿದ್ದಾರೆ. ಈ ಸಮಿತಿಯಲ್ಲಿ ಮಹಿಳೆಯರಿಗೆ, ಬೇರೆ ವರ್ಗದವರಿಗೆ ಯಾವುದೇ ಸ್ಥಾನ ನೀಡಿಲ್ಲ.

ಇನ್ನು ಈ ಸಮಿತಿ ಹೊಸದಾಗಿ ಸೇರಿಸಿರುವ 10 ಬರಹದಲ್ಲಿ 8 ಬರಹಗಳು ಒಂದೇ ಸಮುದಾಯಕ್ಕೆ ಸೇರಿವೆ. ಕೆ.ಬಿ ಹೆಡಿಗೆವಾರ್, ಗಜಾನನ ಶರ್ಮಾ, ಪರಮೇಶ್ವರ್ ಭಟ್, ಗಣೇಶ್ ಶತಾವದಾನಿ, ಬನ್ನಂಜೆ ಗೋವಿಂದಾಚಾರ್ ಹಾಗೂ ಚಿದಾನಂದ ಅವರ ಬರಹ ಸೇರಿಸಲಾಗಿದೆ.

ಇನ್ನು ಹಿಂದುಳಿದ ವರ್ಗಕ್ಕೆ ಸೇರಿದ ಪಿ. ಲಂಕೇಶ್, ಅರವಿಂದ ಮಾಲಗತ್ತಿ, ಸಾರಾ ಅಬೂಬಕರ್, ಎಲ್. ಬಸವರಾಜು, ಎನ್. ನೀಲಾ, ಬಿ.ಟಿ ಲಲಿತಾ ನಾಯಕ್ ಅವರ ಬರಹ ಕೈಬಿಟ್ಟಿದ್ದಾರೆ ಎಂಬ ಮಾತುಗಳು ಕೇಳಿ ಬಂದಿವೆ. ವ್ಯಾಪಕ ಟೀಕೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರು ವರದಿ ಪಡೆದು ಪರಿಷ್ಕರಣೆಗೆ ಮುಂದಾಗಿದ್ದಾರೆ.

## ಗ್ಯಾನವಾಪಿ: ವಕೀಲರನ್ನು ಕೈ ಬಿಟ್ಟ ಹಿಂದೂ ಸಂಘಟನೆ

ವಾರಣಾಸಿ, ಜೂ. 1 – ಗ್ಯಾನವಾಪಿ ಮಸೀದಿ ಹಾಗೂ ತಾಜ್ ಮಹಲ್ ಸೇರಿದಂತೆ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಕಕ್ಷಿದಾರನಾಗಿದ್ದ ಹಿಂದೂ ಸಂಘಟನೆಯೊಂದು, ತನ್ನ ವಕೀಲರಾದ ಹರಿಶಂಕರ್ ಜೈನ್ ಹಾಗೂ ಅವರ ಪುತ್ರ ವಿಷ್ಣು ಜೈನ್ ಅವರನ್ನು ಕೈ ಬಿಟ್ಟಿದೆ.

ಈ ನಿರ್ಧಾರಕ್ಕೆ ಕಾರಣವೇನು ಎಂಬುದನ್ನು ವಿಶ್ವ ವೈದಿಕ ಸನಾತನ ಸಂಘದ ಅಧ್ಯಕ್ಷ ಜಿತೇಂದ್ರ ಸಿಂಗ್ ಬಹಿರಂಗ ಪಡಿಸಿಲ್ಲ. ಆದರೆ, ಗ್ಯಾನವಾಪಿ - ಶೃಂಗಾರ ಗೌರಿ ಪ್ರಕರಣದ ಉಳಿದ ನಾಲ್ಕು ಕಕ್ಷಿದಾರರ ಪರವಾಗಿ ವಾದ ಮಂಡಿಸುವುದನ್ನು ಮುಂದುವರೆಸುವುದಾಗಿ ವಿಷ್ಣು ಜೈನ್ ತಿಳಿಸಿದ್ದಾರೆ.

## ಐಟಿಐ ಪ್ರವೇಶಕ್ಕೆ ಅರ್ಜಿ

ದಾವಣಗೆರೆ, ಜೂ. 1-ತಾಲ್ಲೂಕಿನ ಕೊಡಗನೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಆಗಸ್ಟ್-2022ರ ಸಾಲಿನಲ್ಲಿ ಎಲೆಕ್ಟ್ರೀಷಿಯನ್ ಮತ್ತು ಫಿಟ್ಟರ್ ವೃತ್ತಿಗಳಲ್ಲಿ ಪ್ರವೇಶಕ್ಕಾಗಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸ ಲಾಗಿದೆ. ಅಭ್ಯರ್ಥಿಗಳು ಕೊಡಗನೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಭೇಟಿ ನೀಡಿ ಅರ್ಜಿಗಳನ್ನು ಪಡೆದುಕೊಂಡು, ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಜೂ.6 ಸಂಜೆ 5 ಗಂಟೆಯೊಳಗಾಗಿ ಕಚೇರಿಗೆ ಸಲ್ಲಿಸಬೇಕು.

# ಹರಿಹರ : 2.15 ಕೋ.ರೂ. ಕಾಮಗಾರಿಗಳಿಗೆ ಚಾಲನೆ



ಹರಿಹರ, ಜೂ. 1 - ನಗರದ ಗೌಸಿಯಾ ಕಾಲೋನಿ ಮುಖ್ಯ ರಸ್ತೆ ಮತ್ತು ಕಾಳಿದಾಸ ನಗರದ ಶೇರಾಪುರ ರಸ್ತೆಗೆ 2 ಕೋಟಿ 15 ಲಕ್ಷ ರೂಪಾಯಿ ವೆಚ್ಚದ ಕಾಮಗಾರಿಗೆ ಶಾಸಕ ಎಸ್. ರಾಮಪ್ಪ ಅವರು ಗುದ್ದಲಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದ ಧರ್ಮ ಗುರುಗಳಾದ ಶಂಶುದ್ದೀನ್ ಸಾಬ್ ಬರಕಾತಿ, ನಗರಸಭೆ ಅಧ್ಯಕ್ಷೆ ಶಾಹೀನಾಬಾನು ದಾದಾಪೀರ್, ಉಪಾಧ್ಯಕ್ಷ ಎ. ವಾಮನಮೂರ್ತಿ, ನಗರಸಭೆ ಸದಸ್ಯ ಕೆ.ಜಿ. ಸಿದ್ದೇಶ್, ಶಂಕರ್ ಖಟಾವ್ಕರ್, ಅಬ್ದುಲ್ ಅಲೀಂ, ಎಸ್.ಎಂ. ವಸಂತ್, ಎಂ.ಎಸ್. ಬಾಬುಲಾಲ್, ಬಿ. ಅಲ್ತಾಫ್, ಮುಖಂಡರಾದ ಜಾಕೀರ್, ಆಸೀಫ್, ಆಸೀಫ್ ಆಲಿ ಮತ್ತಿತರರು ಹಾಜರಿದ್ದರು.

# ಪಂಚಮಸಾಲಿ ಸಮಾಜದ ನೌಕರರ ಘಟಕಕ್ಕೆ ಆಯ್ಕೆ



ದಾವಣಗೆರೆ, ಜೂ.1- ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಅಧ್ಯಕ್ಷ ಬಿ.ಸಿ. ಉಮಾಪತಿ ಅಧ್ಯಕ್ಷತೆಯಲ್ಲಿ ಮೊನ್ನೆ ಜರುಗಿದ ಸಭೆಯಲ್ಲಿ ಜಿಲ್ಲಾ ನೌಕರರ ಘಟಕದ ಅಧ್ಯಕ್ಷರಾಗಿ ಕೆ.ಪಿ.ಟಿ.ಸಿ.ಎಲ್ ನಿವೃತ್ತ ಇಂಜಿನಿಯರ್ ಶ್ರೀಧರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗೌರವ ಅಧ್ಯಕ್ಷರಾಗಿ ಕೆ. ಶಿವಶಂಕರ್, ಕಾರ್ಯಾಧ್ಯಕ್ಷರಾಗಿ ಎ. ವೀರಭದ್ರಪ್ಪ, ಉಪಾಧ್ಯಕ್ಷರುಗಳಾಗಿ ಕೆ. ಜಯಣ್ಣ, ಕೆ.ಎಂ.ಮಲ್ಲಿಕಾರ್ಜುನ, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಶಂಭುಲಿಂಗಪ್ಪ, ಸಹಕಾರ್ಯದರ್ಶಿ ಕೆ.ಕೆ. ನಾಗರಾಜ್, ಖಜಾಂಚಿಯಾಗಿ ಬಿ.ಟಿ. ಪ್ರಕಾಶ್ ಆಯ್ಕೆಯಾದರು.

ದಾವಣಗೆರೆ ನಗರ ಪಂಚಮಸಾಲಿ ನೌಕರರ ಘಟಕದ ಗೌರವ ಅಧ್ಯಕ್ಷರಾಗಿ ಕೆ. ಷಣ್ಮುಖಪ್ಪ, ಅಧ್ಯಕ್ಷರಾಗಿ ಕೆ. ಎಸ್. ಸುರೇಶ್, ಉಪಾಧ್ಯಕ್ಷರಾಗಿ ಶ್ರೀಮತಿ ನಾಗವೇಣಿ, ಮಹಡಿ ತಿಪ್ಪೇಸ್ವಾಮಿ, ಎ.ಎಂ ಕೊಟ್ರೇಶ್ವರ., ಪ್ರಧಾನ ಕಾರ್ಯದರ್ಶಿ ಬಿ.ಯು. ಕುಬೇರಪ್ಪ, ಸಹ ಕಾರ್ಯದರ್ಶಿ ವೀರೇಶ ಕಳ್ಳಿಮನಿ, ಖಜಾಂಚಿಯಾಗಿ ನಾಗರಾಜ್. ಹೆಚ್ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ವಾಣಿ ಶಿವಣ್ಣ, ಎಂ. ದೊಡ್ಡಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್. ಕಾಶಿನಾಥ, ತಾಲ್ಲೂಕು ಅಧ್ಯಕ್ಷ ಎಸ್. ಮಲ್ಲಿನಾಥ, ಕಾರ್ಯದರ್ಶಿ ಮಂಜುನಾಥ ಪುರವಂತರ, ಬಾದಾಮಿ ಚಂದ್ರಶೇಖರ ಇದ್ದರು. ಈ ಆಯ್ಕೆ ಪ್ರಕ್ರಿಯೆಯನ್ನು ಚುನಾವಣಾಧಿಕಾರಿ ಬಿ. ಬಸವರಾಜ್ ಉಚ್ಚಂಗಿದುರ್ಗ ನಡೆಸಿಕೊಟ್ಟರು.

# ಸುಮಂಗಳಮ್ಮ ನೇರ್ಲಿಗೆ ಗ್ರಾಪಂ ನೂತನ ಅಧ್ಯಕ್ಷೆ



ದಾವಣಗೆರೆ, ಜೂ.1- ತಾಲ್ಲೂಕಿನ ನೇರ್ಲಿಗೆ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಗಂಗನಕಟ್ಟೆ ಗ್ರಾಮದ ಸದಸ್ಯೆ ಸುಮಂಗಳಮ್ಮ ಮಲ್ಲಿಕಾರ್ಜುನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷರ ಆಯ್ಕೆಗಾಗಿ ಬುಧವಾರ ನಡೆದ ಚುನಾವಣೆಯಲ್ಲಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಬಿ. ಶಿವಾನಂದಪ್ಪ, ಮಾಜಿ ಅಧ್ಯಕ್ಷೆ ಶ್ರೀಮತಿ ಅಕ್ಕಮಹಾದೇವಿ, ಶ್ರೀಮತಿ ರಂಗಮ್ಮ, ಹೆಚ್ ಆರ್ ರಾಜಪ್ಪ, ರಮೇಶನಾಯ್ಕ, ಶ್ರೀಮತಿ ಲಲಿತಮ್ಮ ಸುರೇಶ್, ರಮೇಶ್, ಲಕ್ಷ್ಮಿದೇವಿ, ಬಿ ಮರುಳಸಿದ್ದಾಚಾರಿ, ಜಿ.ತಿಪ್ಪೇಸ್ವಾಮಿ, ಶಶಿಬಾಯಿ, ಭಾಗ್ಯಮ್ಮ ಕೆ ರೇವಣಸಿದ್ದಪ್ಪ , ಕವಿತ , ಹೆಚ್ ಆರ್ ಭಾಗ್ಯ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕೃಷ್ಣಮೂರ್ತಿ, ಚಿನ್ನ ಸಮುದ್ರ ಶೇಖರನಾಯ್ಕ ಇತರರಿದ್ದರು.

# ಮೊದಲು ಪರಿಹಾರ, ನಂತರ ದಾಖಲೆ

(1ನೇ ಪುಟದಿಂದ) ಹಾನಿ ವಿವರ ಹಾಗೂ ನದಿ ನೀರಿನ ಮಟ್ಟದ ವರದಿಯನ್ನು ಪ್ರತಿನಿತ್ಯವು ಎ.ಸಿ. ಕಚೇರಿಯ ಮೂಲಕ ಛಾಯಾಚಿತ್ರದ ಸಮೇತ ವರದಿ ಕಳಿಸಬೇಕು. ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕರು ಹಾಗೂ ತಹಶೀಲ್ದಾರರು ಒಳಗೊಂಡಂತೆ ಎಲ್ಲ ಅಧಿಕಾರಿಗಳು ತಮ್ಮ ಕೇಂದ್ರ ಸ್ಥಾನದಲ್ಲಿಯೇ ಇರಬೇಕು, ಯಾರು ಕೂಡ ರಜೆ ಹಾಕುವಂತಿಲ್ಲ ಎಂದು ಸೂಚಿಸಿದರು.

ಮಳೆಗಾಲದಲ್ಲಿ ಬರಬಹುದಾದ ಸಾಂಕ್ರಾಮಿಕ ರೋಗಗ ಬಗ್ಗೆ ಎಲ್ಲ ತಾಲ್ಲೂಕು ವೈದ್ಯಾಧಿಕಾರಿಗಳೊಂದಿಗೆ ಆರೋಗ್ಯ ಸಭೆ ನಡೆಸಿ ಕ್ರಮ ಕೈಗೊಳ್ಳಿ ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.

ಕಂದಾಯ ಸಚಿವರ ಆದೇಶದ ಮೇರೆಗೆ ಜಿಲ್ಲೆಯ ಹರಿಹರ ಹಾಗೂ ಹೊನ್ನಾಳಿ ತಾಲ್ಲೂಕಿಗಾಗಿ ಎರಡು ಬೋಟ್ ಹಾಗೂ ರಕ್ಷಣಾ ವ್ಯವಸ್ಥೆಗೆ ಸಂಬಂಧಿಸಿದಂತೆ ಎಲ್ಲಾ ಉಪಕರಣಗಳನ್ನು ತರಿಸಲು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ಮಾತನಾಡಿ , 2019 ಕ್ಕೆ ಹೋಲಿಸಿದರೆ ಸ್ಮಾರ್ಟ್ ಸಿಟಿ ಹಾಗೂ ಕಾರ್ಪೊರೇಷನ್ ವತಿಯಿಂದ ಆಗಿರುವ ಕಾಮಗಾರಿಗಳಿಂದ ಈಗ ಎಲ್ಲಿಯೂ ನೀರು ಮನೆಗಳಿಗೆ ನುಗ್ಗುತ್ತಿಲ್ಲ ಎಂದು ಮಾಹಿತಿ ನೀಡಿದರು.

ಬಿತ್ತನೆ ಬೀಜಕ್ಕೆ ಸಂಬಂಧಿಸಿದಂತೆ ಶ್ರೀನಿವಾಸ್ ಚಿಂತಾಲ್ ಮಾಹಿತಿ ನೀಡಿ, 1.36 ಲಕ್ಷ ಹೆಕ್ಟೇರ್‌ಗೆ ಬೇಕಾಗುವ ಮೆಕ್ಕೆಜೋಳ ಬಿತ್ತನೆ ಬೀಜಗಳು ಲಭ್ಯವಿವೆ. ರೈತರು ಮೆಕ್ಕೆಜೋಳದ ಜೊತೆಗೆ ತೊಗರಿ ಬೆಳೆಯನ್ನು ಅಂತರ ಬೇಸಾಯದಲ್ಲಿ ಬೆಳೆಯಲು ರೈತರಿಗೆ ಮಾಹಿತಿ ನೀಡಲಾಗಿದೆ. ಬೆದ್ದಲು ಜಮೀನಿನಲ್ಲಿ ಸೋಯಾಬೀನ್ ಬೆಳೆಯಲು ರೈತರನ್ನು ಪ್ರೋತ್ಸಾಹಿಸಲಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎ.ಚನ್ನಪ್ಪ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಆರ್.ಬಿ.ಬಸರಗಿ, ಡಿಯುಡಿಸಿ ಅಧಿಕಾರಿ ನಜ್ಮಾ, ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ನಾಗರಾಜ್ ಹಾಗೂ ಮತ್ತಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಟಿಕಾಯತ್ ಮೇಲೆ ಹಲ್ಲೆ ನಡೆಸಿದಾತ ಹತ್ಯೆ ದೋಷಿ

ಬೆಂಗಳೂರು, ಜೂ. 1 - ರೈತ ನಾಯಕ ರಾಕೇಶ್ ಟಿಕಾಯತ್ ಮೇಲೆ ಹಲ್ಲೆ ನಡೆಸಿದ ಆರೋಪಿಗಳಲ್ಲಿ ಒಬ್ಬ ಹತ್ಯೆಯಲ್ಲಿ ದೋಷಿಯಾಗಿದ್ದು, ಸನ್ನಡತೆ ಆಧಾರದ ಮೇಲೆ ಜೈಲಿನಿಂದ ಬಿಡುಗಡೆಯಾಗಿದ್ದ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಬಂದಿದ್ದ ಟಿಕಾಯತ್ ಮೇಲೆ ಮಸಿ ಎರಚಲಾಗಿತ್ತು. 52 ವರ್ಷದ ಶಿವಕುಮಾರ್ ಅತ್ರಿ ಹತ್ಯೆ ಪ್ರಕರಣದಲ್ಲಿ ದೋಷಿ. ಸನ್ನಡತೆ ಆಧಾರದ ಮೇಲೆ 2015 ರಲ್ಲಿ ಆತನನ್ನು ಹಾಸನ ಜೈಲಿನಿಂದ ಬಿಡುಗಡೆ ಮಾಡಲಾಗಿತ್ತು ಎಂದು ಡಿ.ಸಿ.ಪಿ. (ಅಪರಾಧ) ಎಸ್.ಡಿ. ಶರಣಪ್ಪ ತಿಳಿಸಿದ್ದಾರೆ. ಆರೋಪಿಗಳ ಹಿನ್ನೆಲೆ ಹಾಗೂ ಯಾವ ಉದ್ದೇಶಕ್ಕಾಗಿ ಟಿಕಾಯತ್ ಮೇಲೆ ಹಲ್ಲೆ ನಡೆಸಲಾಗಿತ್ತು ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ. ಮಸಿ ಎರಚಿದ್ದಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ. ಮಸಿ ಎರಚಿದ ಸಂದರ್ಭದಲ್ಲಿ ಆರೋಪಿಯೋರ್ವ 'ಮೋದಿ, ಮೋದಿ' ಎಂದು ಕೂಗಿದ್ದ. ಪೊಲೀಸರು ಆತನನ್ನು ವಶಕ್ಕೆ ತೆಗೆದುಕೊಂಡಿದ್ದರು.


ವಿಶ್ವಾಸ್ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್

VISHWAS SUPER SPECIALITY HOSPITAL

ನಮ್ಮ ಪರಿವಾರಕ್ಕೆ ಬಂಜೆತನ ಚಿಕಿತ್ಸೆ ತಜ್ಞರನ್ನು ಪ್ರೀತಿಯಿಂದ ಸ್ವಾಗತಿಸುತ್ತೇವೆ

ಡಾ|| ಸುಷ್ಮ ನಾಡಗೌಡ

ಎಂ.ಬಿ.ಬಿ.ಎಸ್, ಎಂ.ಎಸ್ (ಓ.ಬಿ.ಜಿ)
ಫೆಲೋಶಿಪ್ ಇನ್ ಇನ್‌ಫರ್ಟಿಲಿಟಿ ಮತ್ತು
ಐ.ವಿ.ಎಫ್.(ಅಹಮದಬಾದ್)

ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು



ಸೇವೆಗಳು
* ಬಂಜೆತನ ಚಿಕಿತ್ಸೆ ಮತ್ತು ಪ್ರನಾಳ ಶಿಶು
* ಎಲ್ಲಾ ತರಹದ ಸ್ತ್ರೀರೋಗದ ಸಮಾಲೋಚನೆ
* ಪ್ರಸೂತಿ ಸಂಬಂಧಿತ ಸೌಲಭ್ಯ
* ನವಜಾತ ಶಿಶುವಿನ ಆರೈಕೆ ಮತ್ತು ಚಿಕಿತ್ಸೆ
* ಮಹಿಳೆಯರ ಆಹಾರಕ್ಕೆ ಸಂಬಂಧಿತ ಸಲಹೆಗಳು

ಸಮಯ : ಪ್ರತಿದಿನ ಬೆಳಿಗ್ಗೆ 10–30 ರಿಂದ 2–00ರ ವರೆಗೆ
ಸಂಜೆ 6–00 ರಿಂದ 8–00ರ ವರೆಗೆ

ನೊಂದಾಯಿಸಲು ಸಂಪರ್ಕಿಸಿ : 97435 86350

ವಿಳಾಸ : 1ನೇ ಮೇನ್, ಲಕ್ಷ್ಮೀ ಫ್ಲೋರ್‌ಮಿಲ್ ಹತ್ತಿರ,
ನಿಜಲಿಂಗಪ್ಪ ಬಡಾವಣೆ, ದಾವಣಗೆರೆ – 577004


## ರಾಮ ಮಂದಿರ: ಶಿಲಾನ್ಯಾಸ

(1ನೇ ಪುಟದಿಂದ) ಕಾರ್ಯ ಈಗಾಗಲೇ ಪೂರ್ಣಗೊಂಡಿದೆ. 2024ರ ಲೋಕಸಭಾ ಚುನಾವಣೆಗೆ ಮುಂಚೆಯೇ ದೇವಾಲಯದ ನಿರ್ಮಾಣ ಕಾರ್ಯ ಪೂರ್ಣವಾಗುವ ನಿರೀಕ್ಷೆ ಇದೆ.

ವೇದ ಮಂತ್ರಗಳ ಘೋಷಣೆಗಳ ನಡುವೆ ಆದಿತ್ಯನಾಥ್ ಅವರು ಗರ್ಭಗೃಹ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿದ್ದಾರೆ. ಈ ಸಂದರ್ಭದಲ್ಲಿ ರಾಮ ಮಂದಿರ ಟ್ರಸ್ಟ್ ಅಧಿಕಾರಿಗಳು ಹಾಗೂ ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿರುವ ಆದಿತ್ಯನಾಥ್, ದಾಳಿಕೋರರ ವಿರುದ್ಧ ಭಾರತಕ್ಕೆ ದೊರೆತ ಗೆಲುವು ಇದಾಗಿದೆ. ಇದು ಪ್ರತಿಯೊಬ್ಬ ಭಾರತೀಯನಿಗೆ ಹೆಮ್ಮೆಯ ಕ್ಷಣ ಎಂದಿದ್ದಾರೆ.

ದಾಳಿಕೋರರು ಭಾರತದ ನಂಬಿಕೆಯ ಮೇಲೆ ದಾಳಿ ನಡೆಸಿದ್ದರು. ಭಕ್ತರ 500 ವರ್ಷಗಳ ಪೀಡನೆ ಅಂತ್ಯವಾಗಿದೆ. ಇನ್ನು ಮುಂದೆ ದೇವಾಲಯ ನಿರ್ಮಾಣ ಇನ್ನಷ್ಟು ವೇಗ ಪಡೆದುಕೊಳ್ಳಲಿದೆ ಎಂದು ಆದಿತ್ಯನಾಥ್ ಹೇಳಿದ್ದಾರೆ.


Used Furniture for sale

office table, revolving chairs, sofa, jewellery showroom counter, steel rack for stationery articles and etc for sale

SHANTALA chamarajpet, davangere

9686195323, 9686195326


## ಸಾರ್ವಜನಿಕಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತಿಳಿಯಪಡಿಸುವುದೇನೆಂದರೆ ದಾವಣಗೆರೆ ಮಹಾನಗರ ಪಾಲಿಕೆಯ ಸಿದ್ಧವೀರಪ್ಪ ಬಡಾವಣೆಯ 3ನೇ ಕ್ರಾಸ್‌ನಲ್ಲಿರುವ ಶಾಂಭವಿ ನಿಲಯ ಡೋ.ನಂ. 1648/33 ನಿವಾಸಿ ಹಾಗೂ ಮಾಲೀಕರಾದ ನಾನು ಜಿ.ಗೋಪಾಲ ಬಿನ್ ಚನ್ನಬಸಪ್ಪ ಸೇರಿದ ಶಾಂಭವಿ ನಿಲಯದ ಸೇಲ್ ಡೀಡ್‌ಗಳಾದ ಡಾಕ್ಯುಮೆಂಟ್ ನಂ.2808/81-82 ಮತ್ತು ಡಾಕ್ಯುಮೆಂಟ್ ನಂ. 2707/83-84 ಗಳು ಕಳೆದುಹೋಗಿರುತ್ತವೆ. ಇವುಗಳು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ವಿಳಾಸಕ್ಕೆ ತಲುಪಿಸಲು ಕೋರಿಕೊಳ್ಳುತ್ತೇವೆ. ಇವುಗಳನ್ನು ನಾನು ಯಾರಿಗೂ ಪರಭಾರೆ ಮಾಡಿರುವುದಿಲ್ಲ.

**ಷೆಡ್ಯೂಲ್**

ದಾವಣಗೆರೆ ಮಹಾನಗರ ಪಾಲಿಕೆ ಶ್ಯಾಮನೂರು ವಿಭಾಗದಲ್ಲಿ ದಾಖಲಾಗಿರುವ ಸಿದ್ದವೀರಪ್ಪ ಬಡಾವಣೆಯ ಸೈಟ್ ನಂ. 33 ಡೋರ್ ನಂಬರ್ 1648/33 ಅಳತೆಯ ಪೂರ್ವ ಪಶ್ಚಿಮ 30 ಅಡಿ, ಉತ್ತರ ದಕ್ಷಿಣ 45 ಅಡಿ (30x45 ಅಡಿಗಳು = 1350 ಚದರ ಅಡಿಗಳು) ಉಳ್ಳ ನಿವೇಶನದಲ್ಲಿ 2002 ಇಸ್ವಿಯಲ್ಲಿ ಕಟ್ಟಿರತಕ್ಕ ನೆಲಮಹಡಿ ಮತ್ತು ಮೇಲ್‌ಮಹಡಿ ಆರ್‌ಸಿಸಿ ಹಾಕಿರುವ ವಾಸದ ಮನೆಯ ಚೆಕ್ಕುಬಂದಿ : ಪೂರ್ವಕ್ಕೆ ಸೈಟ್ ನಂ. 32, ಪಶ್ಚಿಮಕ್ಕೆ ಸೈಟ್ ನಂ. 34, ಉತ್ತರಕ್ಕೆ ರಿ.ಸ.ನಂ. 115/3 ರಲ್ಲಿ ಜಮೀನು, ದಕ್ಷಿಣಕ್ಕೆ 30 ಅಡಿ ಅಗಲದ ರಸ್ತೆ, ಈ ಮಧ್ಯದ ಸ್ವತ್ತು ಒಂದು

**ವಿಳಾಸ : ಜಿ.ಗೋಪಾಲ ಬಿನ್ ಚನ್ನಬಸಪ್ಪ**
**ಶಾಂಭವಿ ನಿಲಯ, ಡೋ.ನಂ: 1648/33,**
**3ನೇ ಕ್ರಾಸ್, ಸಿದ್ಧವೀರಪ್ಪ ಬಡಾವಣೆ, ದಾವಣಗೆರೆ**
**ಮೊ. ನಂ. 94486 83733**


ಸಾಧನೆಗೆ ಅಭಿನಂದನೆಗಳು



ಈ ಬಾರಿ ನಡೆದ ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 31ನೇ ರ್‍ಯಾಂಕ್ ಮತ್ತು ಕರ್ನಾಟಕಕ್ಕೆ ಮೊದಲ ರ್‍ಯಾಂಕ್ ಪಡೆದುಕೊಂಡಿರುವ ದಾವಣಗೆರೆಯ ಪ್ರಸಿದ್ಧ ಹೋಟೆಲ್ ಉದ್ದಿಮೆದಾರರಾದ

ಶ್ರೀ ಕೆ.ವಿ. ಆನಂದ ರಾವ್
ಅವರ ಮೊಮ್ಮಗ ಹಾಗೂ
ಶ್ರೀ ಕೆ.ಎ.ವಿಠ್ಠಲ್ ರಾವ್ ಮತ್ತು
ಶ್ರೀಮತಿ ಸ್ಮಿತಾ ರಾವ್
ಅವರ ಪುತ್ರನಾದ

ಚಿ|| ಅಭಿನಾಶ್ ರಾವ್
ಅವರಿಗೆ ಹಾರ್ದಿಕ ಅಭಿನಂದನೆಗಳು.



✤ ವಿ.ಡಿ. ಶಿವಕುಮಾರ್ ✤ ಬಿ.ಆರ್. ಸತೀಶ್
✤ ಕೆ. ಆನಂದ ಉಪಾಧ್ಯ ✤ ಕೆ. ಅರುಣ್ ಕುಮಾರ್ ಉಪಾಧ್ಯ
✤ ಎ. ಜೀವನ್ ✤ ಎ. ಶ್ರವಣ್ ಬಿನ್ ಸೂರ್ಯನಾರಾಯಣ
✤ ಚಂದ್ರನಾಥ್, ಮಹಾವೀರ ಹೋಟೆಲ್



ಪ್ರವೇಶ ಪ್ರಕಟಣೆ 2022-23



ಎಸ್.ಎಲ್. ಪದವಿ ಪೂರ್ವ ಕಾಲೇಜ್

ಎಸ್. ನಿಜಲಿಂಗಪ್ಪ ಬಡಾವಣೆ, ಬಕ್ಕೇಶ್ವರ ಕಲ್ಯಾಣ ಮಂಟಪದ ಎದುರು, ದಾವಣಗೆರೆ-4.

2022-23ನೇ ಶೈಕ್ಷಣಿಕ ಸಾಲಿಗೆ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಈ ಕೆಳಕಂಡ ವಿಭಾಗಗಳಿಗೆ ಪ್ರವೇಶಾವಕಾಶವಿರುತ್ತದೆ.

ಕಲಾ ವಿಭಾಗ - HEPS, HEPG, HEKS
ವಾಣಿಜ್ಯ ವಿಭಾಗ -ABES

● ನುರಿತ ಉಪನ್ಯಾಸಕರಿಂದ ಬೋಧನೆ
● ಪ್ರತಿ ತಿಂಗಳು ಕಿರು ಪರೀಕ್ಷೆ ನಡೆಸಲಾಗುವುದು.

ದಾಖಲಾತಿಗಾಗಿ ಅರ್ಜಿ ಪಡೆಯಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

ಮೊಬೈಲ್ : 82963 79619,
99640 05949, 99006 04511

ಸಹಿ/- ಕಾರ್ಯದರ್ಶಿ ಸಹಿ/- ಪ್ರಾಂಶುಪಾಲರು

# ಪಾಲಿಕೆ ಮುಂಭಾಗದ ಕೆಳ ಸೇತುವೆ ಅಸ್ತವ್ಯಸ್ತ



ದಾವಣಗೆರೆ, ಜೂ.1- ಮಹಾನಗರ ಪಾಲಿಕೆ ಮೇಯರ್ ಜಯಮ್ಮ ಗೋಪಿ ನಾಯ್ಕ ರವರಿಗೆ ಅಭಿವೃದ್ಧಿ ಕಾರ್ಯಗಳು ಹಾಗೂ ಅವೈಜ್ಞಾನಿಕ ಕಾಮಗಾರಿಗಳು ಎಂದರೆ ಏನುಎಂಬುದರವ್ಯತ್ಯಾಸವೇ ಗೊತ್ತಿಲ್ಲ ಎಂದೆನಿಸುತ್ತದೆ ಎಂಬುದಕ್ಕೆ ಪಾಲಿಕೆಯ ಮುಂಭಾಗದ ರೈಲ್ವೆ ಅಂಡರ್ ಬ್ರಿಡ್ಜ್ ಕಾಮಗಾರಿಯೇ ಸಾಕ್ಷಿ ಎಂದು ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಹರೀಶ್ ಕೆ.ಎಲ್. ಬಸಾಪುರ ಟೀಕಿಸಿದ್ದಾರೆ.

ಮೇಯರ್ ತಮ್ಮ ಪಕ್ಷದ ನಾಯಕರನ್ನು ಮೆಚ್ಚಿಸುವ ಭರದಲ್ಲಿ ನಗರವನ್ನು ಅಭಿವೃದ್ಧಿ ಕಾರ್ಯಗಳ ಮೂಲಕ ರಾಜ್ಯದಲ್ಲಿಯೇ ಅತ್ಯುತ್ತಮ ನಗರವನ್ನಾಗಿಸಿದ್ದ ಎಸ್ಸೆಸ್ಸೆಂ ನಿರ್ಮಿಸಿದ್ದ ಯೋಜನೆಗಳನ್ನು, ಮಾಡಿದ್ದ ಸಿಸಿ ರಸ್ತೆಗಳನ್ನು ಟೀಕಿಸಿದ್ದ ಇವರಿಗೆ ತಮ್ಮ ಕಚೇರಿಯ ಕೂಗಳತೆ ದೂರದಲ್ಲಿರುವ ರೈಲ್ವೆ ಅಂಡರ್ ಬ್ರಿಡ್ಜ್ ಕಾಮಗಾರಿಯನ್ನು ತಮ್ಮ ಪಕ್ಷದ ನಾಯಕರುಗಳು ಎಷ್ಟು ಬಾರಿ ರಿಪೇರಿ ಮಾಡಿಸಿದ್ದರು ಹಾಗೂ ಸಾರ್ವಜನಿಕರ ಎಷ್ಟು ಹಣ ಖರ್ಚು ಮಾಡಿದ್ದರು ಎಂಬುದನ್ನು ಪರಿಶೀಲಿಸಿದರೆ, ಅಭಿವೃದ್ಧಿ ಕಾರ್ಯಗಳ ಹಾಗೂ ಅವೈಜ್ಞಾನಿಕ ಕಾಮಗಾರಿಗಳ ವ್ಯತ್ಯಾಸ ಅರ್ಥವಾಗುತ್ತದೆ ಎಂದರು.

ತಮ್ಮ ಕ್ಷೇತ್ರಕ್ಕೆ ಹೋಗುವ ಡಿಸಿಎಂ ಟೌನ್‌ಶಿಪ್ ಬ್ರಿಡ್ಜ್, ಹದಡಿ ರಸ್ತೆಯ ನ್ಯಾಷನಲ್ ಹೈವೇಯಲ್ಲಿನ ಬ್ರಿಡ್ಜ್ ಇವರ ನಾಯಕರ ಅವೈಜ್ಞಾನಿಕ ಕಾಮಗಾರಿಗಳಿಗೆ ಹಿಡಿದ ಕೈಗನ್ನಡಿಯಾಗಿದ್ದು, ಯಾವುದೇ ಯೋಜನೆಗಳನ್ನು ಒಂದೇ ಬಾರಿಗೆ ಉತ್ತಮವಾಗಿ ಮಾಡಿ ಮುಗಿಸಿ ಜನರಿಗೆ ಅನುಕೂಲ ಮಾಡಿಕೊಡದ ಹೆಮ್ಮೆ ಇವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಎಸ್.ಎಸ್. ಮಲ್ಲಿಕಾರ್ಜುನ್ ರವರು ತಮ್ಮ ಅವಧಿಯಲ್ಲಿ ನಗರದಲ್ಲಿ ಎಲ್ಲಾ ಕಡೆ ಸಿಸಿ ರಸ್ತೆ ಮಾಡಿಸಿದ್ದು, ಬಿಜೆಪಿ ನಾಯಕರುಗಳು ಅದರ ನಿರ್ವಹಣೆಯಲ್ಲಿಯೂ ಸಹ ಸೋತಿದ್ದು, ಇವರು ಮೊದಲು ರಸ್ತೆ ರಸ್ತೆಗಳ ನಡುವೆ ಇರುವ ಗುಂಡಿಗಳನ್ನು ಮುಚ್ಚಿಸುವ ಕಾರ್ಯವನ್ನಾದರೂ ಮಾಡಲಿ ಎಂದು ತಿಳಿಸಿದರು.

# ಇನ್ನೂ ಆಗದ ರಸ್ತೆ, ಒಳಚರಂಡಿ : ಪ್ರತಿಭಟನೆ



ದಾವಣಗೆರೆ, ಜೂ.1- ಭಾರೀ ಮಳೆ ಸುರಿದ ಪರಿಣಾಮ ನಗರದ ಎಂಸಿಸಿ 'ಬಿ' ಬ್ಲಾಕ್ ನ ಮೂರನೇ ಮುಖ್ಯರಸ್ತೆಯ ಎರಡನೇ ತಿರುವಿನಲ್ಲಿ ನೀರು ನಿಂತು ಜನರು ಸಮಸ್ಯೆ ಅನುಭವಿಸಿದ್ದು, ರಸ್ತೆ ಮತ್ತು ಒಳಚರಂಡಿ ಕಾಮಗಾರಿ ನಡೆಸದೇ ಇರುವುದೇ ಇದಕ್ಕೆ ಕಾರಣ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಸ್ತೆ ಮತ್ತು ಒಳಚರಂಡಿ ಕಾಮಗಾರಿಗೆ ಈ ಹಿಂದೆ ಮುಖ್ಯಮಂತ್ರಿಗಳ ಅನುದಾನ ಬಂದಿತ್ತು. ಚೇಂಜ್ ಆಫ್ ವರ್ಕ್ ಬದಲಾವಣೆ ಆದ ಕಾರಣ ಸರ್ಕಾರದ ಮಟ್ಟದಲ್ಲಿ ಕಡತ ಇದೆ. ಈ ಕಡತ ಹೋಗಿ ಎಂಟರಿಂದ ಹತ್ತು ತಿಂಗಳಾಗುತ್ತಾ ಬರುತ್ತಿದೆ. ಕಾಮಗಾರಿ ನಡೆಸಲು ಎಲ್ಲಾ ರೀತಿಯ ಒಪ್ಪಿಗೆ ಸಿಕ್ಕಿದ್ದರೂ ಇದುವರೆಗೂ ಹಣ ಬಿಡುಗಡೆ ಮಾಡಿಸಿಲ್ಲ. ಬೆಂಗಳೂರಿಗೆ ಹೋಗಿ ಈ ಕೆಲಸ ಮಾಡಿಕೊಂಡು ಬರಲು ಆಡಳಿತ ವರ್ಗ ಹಾಗೂ ಅಧಿಕಾರಿಗಳಿಗೆ ಸಾಧ್ಯವಾಗಿಲ್ಲ. ಇದರಿಂದಾಗಿ ಜೋರು ಮಳೆ ಬಂದರೆ ನೀರು ನಿಲ್ಲುತ್ತದೆ. ವಾಹನಗಳು ನೀರಿನಿಂದ ಜಲಾವೃತಗೊಂಡಿರುತ್ತವೆ. ಜನರು ಓಡಾಡೋದೇ ಕಷ್ಟವಾಗುತ್ತದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಜನರ ಆಕ್ರೋಶ ಹೆಚ್ಚಾಗುತ್ತಿದ್ದಂತೆ ಸ್ಥಳಕ್ಕೆ ಮೇಯರ್ ಜಯಮ್ಮ ಗೋಪಿನಾಯ್ಕ್, ಪಾಲಿಕೆಯ ಅಧಿಕಾರಿಗಳಾದ ಇಇ ಮನೋಹರ್, ಎಇಇ ಜಗದೀಶ್, ಎಇ ಮಧುಸೂದನ್ ಸ್ಥಳಕ್ಕೆ ಆಗಮಿಸಿದ್ದರು. ಪಾಲಿಕೆಯ ವಿರೋಧ ಪಕ್ಷದ ನಾಯಕ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ಸಹ ಪರಿಸ್ಥಿತಿಯ ಬಗ್ಗೆ ಮಾಹಿತಿ ನೀಡಿದರು.

ಈ ವೇಳೆ ನೀರು ನಿಂತಿರುವುದನ್ನು ಸ್ಥಳೀಯರು ಗಮನಕ್ಕೆ ತಂದರು. ಮೇಯರ್ ಸ್ಥಳ ಪರಿಶೀಲನೆ ಮಾಡಿ ಹೋದರೆ ಆಗದು. ಕೆಲಸ ಆಗಬೇಕು. ಇನ್ನು ಹದಿನೈದು ದಿನಗಳೊಳಗೆ ಕಾಮಗಾರಿ ಆರಂಭಿಸದಿದ್ದರೆ ವಾರ್ಡ್ ನ ಜನರು ಪಾಲಿಕೆಗೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿದರಲ್ಲದೇ, ಆಯುಕ್ತರು ಸಹ ಈ ಬಗ್ಗೆ ಗಮನ ಹರಿಸಬೇಕು. ಅವರ ಗಮನಕ್ಕೂ ತನ್ನಿ. ಸಮಸ್ಯೆ ಆದಷ್ಟು ಬೇಗ ಪರಿಹಾರ ಆಗಬೇಕು. ರಸ್ತೆ ಕಾಮಗಾರಿ ಪೂರ್ಣಗೊಳಿಸಿ ಒಳಚರಂಡಿ ವ್ಯವಸ್ಥೆಯೂ ಸಮರ್ಪಕವಾಗಿ ಆಗಬೇಕು ಎಂದು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಮೇಯರ್ ಜಯಮ್ಮ ಗೋಪಿನಾಯ್ಕ್, ಬೆಂಗಳೂರಿಗೆ ಹೋಗಿ ಕಡತ ಯಾವ ಇಲಾಖೆಯಲ್ಲಿದೆ ಎಂಬುದನ್ನು ಪರೀಕ್ಷಿಸಿ ಆದಷ್ಟು ಬೇಗ ಕಾಮಗಾರಿ ಆರಂಭಿಸಲಾಗುವುದು. ವಿಪಕ್ಷ ನಾಯಕ ಮಂಜುನಾಥ್ ಗಡಿಗುಡಾಳ್ ಅವರನ್ನು ಅವಶ್ಯಕತೆ ಇದ್ದರೆ ಕರೆದುಕೊಂಡು ಹೋಗುತ್ತೇವೆ. ಹದಿನೈದು ದಿನಗಳೊಳಗಾಗಿ ಸಮಸ್ಯೆಗೆ ಪರಿಹರಿಸುತ್ತೇವೆ ಎಂಬ ಭರವಸೆ ನೀಡಿದ ಬಳಿಕ ಜನರು ಸಮಾಧಾನಗೊಂಡರು.

## ನಗರದಲ್ಲಿ ಇಂದು ದತ್ತಿ ಉಪನ್ಯಾಸ, ಶರಣ ಚಿಂತನಾ ಕಾರ್ಯಕ್ರಮ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ನಗರ ಘಟಕ ಮತ್ತು ವಿನೂತನ ಮಹಿಳಾ ಸಮಾಜ ಇವರ ಸಂಯುಕ್ತಾಶ್ರಯದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ವಿದ್ಯಾನಗರ ವಿನಾಯಕ ಬಡಾವಣೆಯ 6 ನೇ ಕ್ರಾಸ್‌ನಲ್ಲಿರುವ ವಿನಾಯಕ ದೇವಸ್ಥಾನದ ಆವರಣದಲ್ಲಿ ದತ್ತಿ ಉಪನ್ಯಾಸ ಮತ್ತು ಶರಣ ಚಿಂತನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ ತಿಳಿಸಿದ್ದಾರೆ.

ವಿನೂತನ ಮಹಿಳಾ ಸಮಾಜದ ಅಧ್ಯಕ್ಷೆ ಪ್ರಸನ್ನ ಚಂದ್ರಪ್ರಭಾ ಕಾರ್ಯಕ್ರಮ ಉದ್ಘಾಟಿಸುವರು. ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಎಂ. ಪರಮೇಶ್ವರಪ್ಪ ಸಿರಿಗೆರೆ ಇವರು ಅಧ್ಯಕ್ಷತೆ ವಹಿಸಲಿದ್ದಾರೆ.

'ಅಕ್ಕಮಹಾದೇವಿ : ಜೀವನ ಮತ್ತು ಸಾಹಿತ್ಯಿಕ ವಿಶ್ಲೇಷಣೆ' ಕುರಿತು ಚಾಣುಕ್ಯ ಪದವಿ ಕಾಲೇಜಿನ ಕನ್ನಡ ಉಪನ್ಯಾಸಕಿ ಪಿ.ಹೆಚ್. ಶಾಂತಲಾ ಮಾತನಾಡಲಿದ್ದಾರೆ. ಮಲ್ಲಿಗೆರೆ ಲಿಂ. ಚಂದ್ರಮ್ಮ ಲಿಂ. ಮಠದ ಗುರುಸಿದ್ಧಯ್ಯ ದತ್ತಿ, ಮಲ್ಲಿಗೆರೆ ಲಿಂ. ಮಠದ ಗೌರಮ್ಮ ಲಿಂ. ಮಠದ ಸಿದ್ಧಬಸಯ್ಯ, ಮಲ್ಲಿಗೆರೆ ಲಿಂ. ಪಾರ್ವತಮ್ಮ ಲಿಂ. ಚೆನ್ನಮ್ಮ ಲಿಂ. ಶಂಕರಮ್ಮ ಮತ್ತು ಲಿಂ. ಮಠದ ಪಂಚಾಕ್ಷರಯ್ಯ ದತ್ತಿ ಹೆಸರಿನಲ್ಲಿ ಕಾರ್ಯಕ್ರಮ ಆಯೋಜನೆಗೊಂಡಿದ್ದು, ತರಳಬಾಳು ಬಡಾವಣೆಯ ಎಂ. ನೀಲಾಂಬಿಕೆ ಮತ್ತು ಡಾ. ಎಂ. ಈಶ್ವರ ಶರ್ಮ ದತ್ತಿ ದಾನಿಗಳಾಗಿದ್ದಾರೆ.

### ಓದುಗರ ಪತ್ರ

## ಕೆಳಸೇತುವೆ ಸಮಸ್ಯೆ ಪರಿಹರಿಸುವರೇ

ಮಾನ್ಯರೇ,

ಹಳೇ, ಹೊಸ ದಾವಣಗೆರೆ ನಗರಗಳನ್ನು ಸಂಪರ್ಕಿಸುವ ಪ್ರಮುಖ ಮಾರ್ಗ. ಹಲವು ವರ್ಷಗಳಿಂದ ಮಳೆ ಬಂದಾಗಲೆಲ್ಲಾ ಈ ಸೇತುವೆ ಮಳೆನೀರು ತುಂಬಿಕೊಂಡು, ಒಂದು ಮಳೆಗೆ ಮೂರ್ನಾಲ್ಕು ದಿನ ಜನ, ವಾಹನ ಅಡ್ಡಾಡದಂತೆ ಜನರಿಂದ ಶಾಪ ಹಾಕಿಸಿ ಕೊಳ್ಳುತ್ತಿತ್ತು.

ಇದಕ್ಕೊಂದು ಶಾಶ್ವತ ಪರಿಹಾರವೇ ಇಲ್ಲವೇ ಜನ ರೋಸಿ ಹೋಗಿ ಇದೊಂದು ಶಾಪವೆಂದೇ ಪರಿಗಣಿಸಿದ್ದರು. ನಗರದ ನಗರಸಭೆ ಈಗ ನಗರ ಪಾಲಿಕೆಯಾಗಿ ಇದುವರೆಗೆ ನೂರಾರು ಇಂಜಿನಿಯರ್‌ಗಳು ಸೇವೆ ಸಲ್ಲಿಸಿ ಸಂಬಳ, ಸಾರಿಗೆ ,ಕಾಣಿಕೆ ಎಲ್ಲಾ ಪಡೆದು ಹೋದರೂ ಈ ಕೆಳ ಸೇತುವೆಗೆ ಪರಿಹಾರ ಒದಗಿಸಲಾಗಲಿಲ್ಲ. ಅಥವಾ ಈ ಸಮಸ್ಯೆಯ ಪರಿಹಾರಕ್ಕೆ ಅವರ ಇಂಜಿನಿಯರಿಂಗ್ ಓದಿನ ಪಾಠಗಳಲ್ಲಿ ಪರಿಹಾರ ಸೂತ್ರವೇ ಇರಲಿಲ್ಲವೇನೋ!

ಆರೆಂಟು ತಿಂಗಳ ಹಿಂದಿನ ಪಾಲಿಕೆಯ ಮೇಯರ್ ಒಬ್ಬರು ಇದಕ್ಕೆ ಶಾಶ್ವತ ಪರಿಹಾರ ಮಾಡುವುದಾಗಿ ಹೇಳಿ ಅದಕ್ಕೆ ಸುಮಾರು ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುವುದಾಗಿ ಹೇಳಿ ಎರಡು ತಿಂಗಳು ಸೇತುವೆಯನ್ನು ಮುಚ್ಚಿಸಿದ್ದೂ ಆಯಿತು. ಇನ್ನೇನು ಶಾಶ್ವತ ಪರಿಹಾರ ಸಿಕ್ಕಿತು ಎಂದು ಜನ ಏನೋ ನಿಟ್ಟುಸಿರು ಬಿಟ್ಟಿದ್ದಷ್ಟೇ ಬಂತು. ಈ ಕೆಳ ಸೇತುವೆ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನೇನೋ ನುಂಗಿ ಬಿಟ್ಟಿತು ಆದರೆ ಮಳೆ ನೀರನ್ನು ಮಾತ್ರ ಕುಡಿಯಲು ತಯಾರಾಗಲಿಲ್ಲ!

ಈಗ ಹೇಳಿ ನಾಗರಿಕರು ಲಕ್ಷಾಂತರ ರೂಪಾಯಿ ಗಳನ್ನು ಅಪೋಶನ ತೆಗೆದು ಕೊಂಡ ಕೆಳಸೇತುವೆಯನ್ನೇ ಶಪಿಸಬೇಕೋ? ನಾಗರೀಕರ ತೆರಿಗೆ ಹಣ ಸೇತುವೆಯ ಗುಂಡಿಗೆ ಸುರಿದ ಅಧಿಕಾರಸ್ಥರನ್ನು ಶಪಿಸ ಬೇಕೋ? ತಿಳಿಯುತ್ತಿಲ್ಲ.

ಚಿತ್ರದಲ್ಲಿರುವುದು ನಿನ್ನೆ ರಾತ್ರಿ ಅರ್ಧ ಗಂಟೆ ಸುರಿದ ಪರಿಣಾಮವಾಗಿ ಕೆಳಸೇತುವೆ ತುಂಬಿ ತುಳುಕಿ ಈಜುಕೊಳದಂತಾಗಿರುವುದು. ಹೇಗೋ ದಾವಣಗೆರೆಯ ಎರಡೂ ಈಜುಕೊಳಗಳು ಉಪಯೋಗಕ್ಕೆ ಬಾರದೇ ಶಿಥಿಲ ಗೊಂಡು ನೀರು ಸೋರಿಕೆಯಾಗುತ್ತಿರುವ, ಹೇಗೂ ಮಳೆ ನೀರನ್ನು ಹಿಡಿದಿಟ್ಟುಕೊಳ್ಳಲು ಸಶಕ್ತವಾಗಿರುವ ಈ ರೈಲ್ವೆ ಕೆಳಸೇತುವೆಯನ್ನೇ ಈಜು ಕೊಳವಾಗಿ ಪರಿವರ್ತಿಸಿ ಇದಕ್ಕೊಂದು ಈ ಶಾಶ್ವತ ಪರಿಹಾರ ಕಲ್ಪಿಸಲು ನಗರಪಾಲಿಕೆ ದೃಢ ಹೆಜ್ಜೆ ಇಡಬೇಕೆಂದು ಆಶಿಸುವೆ.

- ಇಮ್ತಿಯಾಜ್ ಹುಸೇನ್
ದಾವಣಗೆರೆ

# ಸಚಿವ ನಾಗೇಶ್ ಮನೆಗೆ ಮುತ್ತಿಗೆ ಎನ್.ಎಸ್.ಯು.ಐ. ಕಾರ್ಯಕರ್ತರು ವಶಕ್ಕೆ

## ಬೆಂಕಿ ಹಚ್ಚಲು ಯತ್ನ ನಡೆದಿತ್ತು : ಸಚಿವ ಆರಗ ಜ್ಞಾನೇಂದ್ರ

ಬೆಂಗಳೂರು, ಜೂ. 1 – ಎನ್.ಎಸ್.ಯು.ಐ. ವಿದ್ಯಾರ್ಥಿ ಸಂಘಟನೆಯ ಪದಾಧಿಕಾರಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮನೆ ಮುಂಭಾಗ ಪ್ರತಿಭಟನೆ ನಡೆಸಿ, ಅವರ ಮನೆಗೆ ನುಗ್ಗಲು ಯತ್ನಿಸಿದ ಘಟನೆ ತಿಪಟೂರಿನಲ್ಲಿ ಬುಧವಾರ ನಡೆದಿದೆ.

ನಾಗೇಶ್ ಮನೆಯ ಎದುರು ಆರ್.ಎಸ್.ಎಸ್. ಸಮವಸ್ತ್ರಕ್ಕೆ ಬೆಂಕಿ ಹಚ್ಚಿದ ಕಾರ್ಯಕರ್ತರು, ನಂತರ ಮನೆಗೆ ನುಗ್ಗುವ ಯತ್ನ ನಡೆಸಿದ್ದಾರೆ. ಅವರನ್ನು ಪೊಲೀಸರು ತಡೆದು ಹೊರ ಹಾಕಿದ್ದಾರೆ.

ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಕೀರ್ತಿ ಗಣೇಶ್ ನೇತೃತ್ವದಲ್ಲಿ ನಡೆದ ಪ್ರತಿಭಟನೆ ನಡೆದಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಗೃಹ ಸಚಿವ ಆರಗ ಜ್ಞಾನೇಂದ್ರ, ಸಚಿವರ ಮನೆಗೆ ಬೆಂಕಿ ಹಚ್ಚಲು ಪ್ರಯತ್ನಿಸಿ ಭಯದ ವಾತಾವರಣ ಸೃಷ್ಟಿಸಿದ್ದಾರೆ. ಘಟನೆಯಲ್ಲಿ ಭಾಗಿಯಾದ 15 ಜನರನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

ಪ್ರತಿಭಟನೆಗೆ ಬಂದಿರುವವರು ಯಾರೂ ಸ್ಥಳೀಯರಲ್ಲ. ದಾವಣಗೆರೆ, ಶಿವಮೊಗ್ಗ, ಭದ್ರಾವತಿ, ಬೆಂಗಳೂರು, ಹಾಸನ, ಮಂಗಳೂರಿನವರು. ಬಹಳ ವ್ಯವಸ್ಥಿತವಾಗಿ ಬಂದಿರುವುದನ್ನು ನೋಡಿದರೆ ನಾಗೇಶ್ ಪ್ರಾಣ ತೆಗೆಯುತ್ತಿದ್ದರೇನೋ ಎನ್ನುವಂತಿದೆ. ಸಚಿವರ ಮನೆಗೆ, ಸಚಿವರಿಗೆ ಸೂಕ್ತ ಭದ್ರತೆ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಎನ್.ಎಸ್.ಯು.ಐ. ಕಾರ್ಯಕರ್ತರು ಪ್ರತಿಭಟನೆ ಮಾಡಿ ದಾಂಧಲೆ ನಡೆಸಿರುವುದು ಖಂಡನೀಯ. ಇಂತಹ ನಡೆ ವಿದ್ಯಾರ್ಥಿಗಳಿಗೆ, ಶಿಕ್ಷಣ ಪ್ರೇಮಿಗಳಿಗೆ ಶೋಭೆ ತರುವುದಿಲ್ಲ. ಈ ಕುಕೃತ್ಯ ನಡೆಸಿರುವ ದುಷ್ಕರ್ಮಿಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

ಈ ಬಗ್ಗೆ ಮಾತನಾಡಿರುವ ಸಚಿವ ನಾಗೇಶ್, ಘಟನೆ ನಡೆದಾಗ ನನ್ನ ಮಗ ಬಿಟ್ಟರೆ ಬೇರೆ ಯಾರೂ ಇರಲಿಲ್ಲ. ನಾನು ಗುಜರಾತ್‌ನ ಕಾರ್ಯಕ್ರಮವೊಂದರಲ್ಲಿ ಭಾಗಿಯಾಗಿದ್ದೆ. ನಾನು ಇರುವುದಿಲ್ಲ ಎಂಬುದನ್ನೇ ತಿಳಿದು ಪ್ರತಿಭಟನಾಕಾರರು ಬಂದಿದ್ದಾರೆ ಎಂದಿದ್ದಾರೆ.

ಘಟನೆಯನ್ನು ಖಂಡಿಸಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಎನ್.ಎಸ್.ಯು.ಐ. ಕಾರ್ಯಕರ್ತರು ತಾಲಿಬಾನ್ ರೀತಿಯ ವರ್ತನೆ ತೋರಿದ್ದಾರೆ. ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಅವರ ಮನೆಗೆ ಬೆಂಕಿ ಹಚ್ಚಿದ ರೀತಿಯಲ್ಲೇ, ಸಚಿವರ ಮನೆಗೆ ಬೆಂಕಿ ಹಚ್ಚುವ ಸಂಚು ನಡೆಸಲಾಗಿತ್ತು ಎಂದು ಆರೋಪಿಸಿದ್ದಾರೆ.

## ಅನಧಿಕೃತ ಒಎಫ್‌ಸಿ, ಡಿಶ್, ಡಾಟಾ ಕೇಬಲ್ ತೆರವುಗೊಳಿಸಲು ನೋಟಿಸ್

ದಾವಣಗೆರೆ, ಮೇ 31- ಬೆಸ್ಕಾಂ ನಗರ ಉಪ ವಿಭಾಗ-1 ಇದರ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳಿಗೆ ಎಳೆದಿರುವ ಒಎಫ್‌ಸಿ, ಡಿಶ್, ಕೋ-ಆಕ್ಸಿಯಲ್ ಕೇಬಲ್ ಇನ್ನಿತರೆ ಸಂವಹನ ಅನಧಿಕೃತ ಕೇಬಲ್‌ಗಳನ್ನು ತೆರವುಗೊಳಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಎಚ್ಚರಿಕೆ ನೋಟಿಸ್ ನೀಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ವಿದ್ಯುತ್ ಕಂಬಗಳ ಮೇಲೆ ಅನಧಿಕೃತ ಕೇಬಲ್ ಗಳನ್ನು ಎಳೆಯುವುದರಿಂದ ಅವಘಡ ಗಳು ಸಂಭವಿಸುತ್ತಿದ್ದು, ಸಾರ್ವಜನಿಕ ಆಸ್ತಿ, ಜೀವರಾಶಿಗೆ ಹಾನಿಕರವಾಗಿದ್ದು, ಬೆವಿಕಂ ನೌಕರರು ಸುರಕ್ಷಿತವಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಇಂತಹ ಅವಘಡಗಳನ್ನು ತಡೆಯಲು ಅನೇಕ ಸುರಕ್ಷಾ ಕ್ರಮಗಳನ್ನು ಕೈಗೊಳ್ಳ ಲಾಗಿದೆ. ಆದ್ದರಿಂದ ಕೂಡಲೇ ವಿದ್ಯುತ್ ಕಂಬಗಳ ಮೇಲೆ ಎಳೆದಿರುವ ಅನಧಿಕೃತ ಎಲ್ಲಾ ಕೇಬಲ್‌ಗಳನ್ನು ತೆರವುಗೊಳಿಸುವಂತೆ ನೋಟಿಸ್ ನೀಡಲಾಗಿದೆ.

## ನಾಡಗೀತೆ ವಿಕೃತಗೊಳಿಸಿ ಪ್ರಕಟಿಸಿದವರ ವಿರುದ್ಧ ಕ್ರಮಕ್ಕೆ ವಾಮದೇವಪ್ಪ ಒತ್ತಾಯ

ದಾವಣಗೆರೆ, ಜೂ. 1- ರಾಷ್ಟ್ರಕವಿ ಕುವೆಂಪು ರಚಿಸಿರುವ ನಾಡಗೀತೆಯನ್ನು ವಿಕೃತಗೊಳಿಸಿ ಪ್ರಕಟಿಸಿರುವವರ ವಿರುದ್ಧ ಉಗ್ರ ಕ್ರಮ ಕೈಗೊಳ್ಳುವಂತೆ ಜಿಲ್ಲೆಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಒತ್ತಾಯಿಸಿದ್ದಾರೆ.

ಪ್ರತಿಯೊಬ್ಬ ನಾಗರಿಕರು ಖಂಡಿಸಲೇಬೇಕಾದ ವಿಷಯ ಇದಾಗಿದೆ ಎಂದು ವಾಮದೇವಪ್ಪ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

## ಹಡಗಲಿ ಸಾರಿಗೆ ಡಿಪೋ : ನಿವೃತ್ತಿ - ಬೀಳ್ಕೊಡುಗೆ

ಹೂವಿನಹಡಗಲಿ, ಜೂ.1- ಇಲ್ಲಿನ ಈಶಾನ್ಯ ರಸ್ತೆ ಸಾರಿಗೆ ಡಿಪೋದ ನಾಲ್ವರು ಸಿಬ್ಬಂದಿ ನಿವೃತ್ತಿ ಹೊಂದಿದ್ದು ಅವರಿಗೆ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಲಾಗಿತ್ತು. ವಯೋನಿವೃತ್ತರಾದ ಹೆಚ್. ಬಸನಗೌಡ, ಬಸವರಾಜ್, ಮಲ್ಲಿಕಾರ್ಜುನ, ದೇವಮ್ಮ ಇವರಿಗೆ ಈಶಾನ್ಯ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿಗಳು, ವ್ಯವಸ್ಥಾಪಕರು ಆತ್ಮೀಯವಾಗಿ ಬೀಳ್ಕೊಟ್ಟರು.

## ಜಿಲ್ಲೆಯಲ್ಲಿನ ಮಳೆಗೆ 0.30 ಲಕ್ಷ ರೂ.ನಷ್ಟು ಹಾನಿ

ದಾವಣಗೆರೆ, ಜೂ.1- ಜಿಲ್ಲೆಯಲ್ಲಿ ಮೇ 31 ರಂದು 12.0 ಮಿ.ಮೀ. ಸರಾಸರಿ ಮಳೆಯಾಗಿದ್ದು. 0.30 ಲಕ್ಷ ರೂ ಅಂದಾಜು ನಷ್ಟ ಸಂಭವಿಸಿದೆ.

ಚನ್ನಗಿರಿಯಲ್ಲಿ 2.0 ಮಿ.ಮೀ ವಾಡಿಕೆ, 3.0 ಮಿ.ಮೀ ವಾಸ್ತವ, ದಾವಣಗೆರೆ ತಾಲ್ಲೂಕಿನಲ್ಲಿ 3.0 ಮಿ.ಮೀ, ವಾಡಿಕೆ, 21.0 ವಾಸ್ತವ ಮಿ.ಮೀ, ಹರಿಹರದಲ್ಲಿ 3.0 ಮಿ.ಮೀ ವಾಡಿಕೆ, 14.0 ಮಿ.ಮೀ ವಾಸ್ತವ, ಹೊನ್ನಾಳಿ 5.0 ಮಿ.ಮೀ ವಾಡಿಕೆ, 4.0 ಮಿ.ಮೀ ವಾಸ್ತವ, ಜಗಳೂರು 2.0 ಮಿ.ಮೀ ವಾಡಿಕೆ, 25.0 ಮಿ.ಮೀ ವಾಸ್ತವ, ನ್ಯಾಮತಿಯಲ್ಲಿ 4.0 ಮಿ.ಮೀ ವಾಡಿಕೆ, ಮಳೆಯಾಗಿದೆ.

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ 1 ಕಚ್ಚಾಮನೆ ಭಾಗಶಃ ಹಾನಿಯಾಗಿದ್ದು, ಸುಮಾರು ರೂ. 0.30 ಲಕ್ಷ ಅಂದಾಜು ನಷ್ಟ ಸಂಭವಿಸಿರುತ್ತದೆ. ಸರ್ಕಾರದ ಮಾರ್ಗಸೂಚಿ ಅನ್ವಯ ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದೆಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

## ಯೋಗ ದಿನಾಚರಣೆ: ಸಲಹೆಗಳಿಗೆ ಆಹ್ವಾನ

ಆಯುಷ್ ಇಲಾಖೆ ವತಿಯಿಂದ ಜೂನ್ 21 ರಂದು 8ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದ್ದು, ಯೋಗ ಸಂಬಂಧಿತ ಸಂಘ, ಸಂಸ್ಥೆಗಳು ಮತ್ತು ಇತರೆ ಯೋಗಾಸಕ್ತ ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಜಿಲ್ಲಾ ಆಯುಷ್ ಕಚೇರಿ, ಪಂಚಾಯತ್‌ರಾಜ್ ಕಾರ್ಯಪಾಲಕ ಇಂಜಿನಿಯರಿಂಗ್ ವಿಭಾಗೀಯ ಕಚೇರಿಯನ್ನು ಇಂದು ಮಧ್ಯಾಹ್ನ 3.30 ರಿಂದ ಸಂಜೆ 5.30 ರೊಳಗೆ ಸಂಪರ್ಕಿಸಿ, ತಮ್ಮ ಸೂಕ್ತ ಸಲಹೆಗಳನ್ನು ನೀಡಬಹುದೆಂದು ಜಿಲ್ಲಾ ಆಯುಷ್ ಅಧಿಕಾರಿಗಳು ತಿಳಿಸಿದ್ದಾರೆ.

## ರಂಗಭೂಮಿಯಿಂದ ಕಲಿಕೆ ಇಮ್ಮಡಿ: ಟಿ.ಎಸ್ ನಾಗಾಭರಣ



ದಾವಣಗೆರೆ, ಜೂ. 1- ರಂಗಭೂಮಿಯಿಂದ ಕಲಿಕೆ ಇಮ್ಮಡಿಯಾಗುತ್ತದೆ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಹೇಳಿದರು.

ಹರಿಹರ ತಾಲ್ಲೂಕು ಕೊಂಡಜ್ಜಿ ಸ್ಕೌಟ್ಸ್ ಅಂಡ್ ಗೈಡ್ಸ್ ತರಬೇತಿ ಕೇಂದ್ರದ ಆವರಣದಲ್ಲಿ ಭಾರತದ 75 ನೇ ಸ್ವಾತಂತ್ರ್ಯ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಅನ್ವೇಷಕರು ಫೌಂಡೇಶನ್ ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ರಂಗಕರ್ಮಿ ಬಿ.ವಿ. ಕಾರಂತರ 'ಪಂಜರ ಶಾಲೆ' ನಾಟಕ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ರಂಗಭೂಮಿಯು ಅಬ್ಜರ್ವೇಶನ್, ಇಮ್ಯಾಜಿನೇಶನ್, ಇಂಪರ್ವೇಜೇಶನ್ ಈ ಮೂರು ಅಂಶಗಳಿಂದ ಕೂಡಿದ್ದು, ಮೂರು ಅಂಶಗಳು ಕಲಿಕೆಯಲ್ಲಿ ಮಹತ್ತರ ಪಾತ್ರ ವಹಿಸುತ್ತವೆ ಎಂದರು.

ಮಕ್ಕಳು ರಂಗಭೂಮಿಯಲ್ಲಿ ಪಾಲ್ಗೊಂಡರೆ ಅವರ ಕ್ರಿಯಾಶೀಲತೆ ಹೆಚ್ಚಾಗುತ್ತದೆ. ಬಿ.ವಿ. ಕಾರಂತರು ಪಂಜರ ಶಾಲೆ ನಾಟಕ ಮಾಡಿಸಿದ್ದಾಗ ನಾನು ಬ್ಯಾಕ್ ಸ್ಟೇಜ್‌ನಲ್ಲಿ ಕೆಲಸ ಮಾಡಿದ್ದೆ ಎಂದು ನೆನಪಿಸಿಕೊಂಡರು.

ಕಾರ್ಯಕ್ರಮದಲ್ಲಿ ಐ ಮಾಸ್ಟರ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ನಂದೀಶ ಬಾದಾಮಿ, ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ರವೀಂದ್ರ ಅರಳಗುಪ್ಪಿ ಉಪಸ್ಥಿತರಿದ್ದರು.

ರಂಗ ನಿರ್ದೇಶಕ ಎನ್.ಟಿ. ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಎಸ್. ಎಸ್. ಸಿದ್ಧರಾಜು ಸ್ವಾಗತಿಸಿದರು. ಕೆ.ಪಿ. ರುದ್ರೇಶಮೂರ್ತಿ ವಂದಿಸಿದರು. ನಂತರ ಶಂಭುಲಿಂಗ ಸಿ.ಇ. ತಂಡದಿಂದ ಬಿ.ವಿ. ಕಾರಂತರ 'ಪಂಜರ ಶಾಲೆ' ನಾಟಕ ಪ್ರದರ್ಶನ ನಡೆಯಿತು.

## ಬಾಲಿವುಡ್ ಗಾಯಕ ಕೆ.ಕೆ. ನಿಧನ



ಕೊಲ್ಕೊತಾ, ಜೂ.1 – ಬಾಲಿವುಡ್‌ನ ಹೆಸರಾಂತ ಗಾಯಕ ಕೃಷ್ಣಕುಮಾರ್ ಕುನ್ನತ್ ಮಂಗಳವಾರ ರಾತ್ರಿ ಕೊಲ್ಕೊತಾದಲ್ಲಿ ನಿಧನರಾಗಿದ್ದಾರೆ. ಅವರಿಗೆ 53 ವರ್ಷ ವಯಸ್ಸಾಗಿತ್ತು. ದಕ್ಷಿಣ ಕೊಲ್ಕೊತಾದ ನಜ್ರುಲ್ ಮಂಚ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಸಂಗೀತಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಅವರು, ಹಠಾತ್ತನೆ ಕುಸಿದಿದ್ದಾರೆ. ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಅವರು ಸಾವನ್ನಪ್ಪಿದ್ದಾರೆ. ಕೆ.ಕೆ. ಎಂದೇ ಹೆಸರಾಗಿರುವ ಕೃಷ್ಣಕುಮಾರ್ ಕುನ್ನತ್, ಅಂತ್ಯಕ್ರಿಯೆ ಮುಂಬೈನಲ್ಲಿ ನೆರವೇರಲಿದೆ.

ಓಂ ಶಾಂತಿ ಓಂ, ಜನ್ನತ್, ಬಚ್ನಾ ಏ ಹಸೀನೋ ಹಾಗೂ ಹಮ್ ದಿಲ್ ದೇ ಚುಕೆ ಸನಮ್ ಮುಂತಾದ ಚಿತ್ರಗಳ ಅವರ ಹಾಡುಗಳು ಜನಪ್ರಿಯವಾಗಿವೆ.

ಹಿಂದಿಯಷ್ಟೇ ಅಲ್ಲದೇ, ತಮಿಳು, ತೆಲುಗು, ಕನ್ನಡ, ಮಲಯಾಳಂ, ಮರಾಠಿ ಹಾಗೂ ಬಂಗಾಳಿ ಸೇರಿದಂತೆ ಹಲವು ಭಾಷೆಗಳಲ್ಲಿ ಹಾಡಿದ್ದಾರೆ.


**ಅಂಗಡಿ ಬಾಡಿಗೆಗೆ ಇದೆ**

ಮಂಡಿಪೇಟೆಯಲ್ಲಿ ಚಾಲ್ತಿಯಲ್ಲಿ ಇರುವ
ಬೆಳ್ಳಿ-ಬಂಗಾರದ ಅಂಗಡಿ ಬಾಡಿಗೆಗಿದೆ.
12 x70 ಅಡಿ ಉದ್ದಗಲದ ಪೂರ್ಣ ಪ್ರಮಾಣದ
ಸಿದ್ಧಾವಾಗಿರುವ ಬೆಳ್ಳಿ-ಬಂಗಾರದ ಅಂಗಡಿ ಜೊತೆಯಲ್ಲಿ
ವ್ಯವಸ್ಥಿತ, ವಾಸಕ್ಕೆ ಮನೆ ಬಾಡಿಗೆಗೆ ಇವೆ.


ಮಾಹಿತಿಗಾಗಿ ಸಂಪರ್ಕಿಸಿ : 93419 69084


## ನಗರಕ್ಕೆ ಇಂದು ಸಚಿವ ಬಸವರಾಜ

ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ ಬಸವರಾಜ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ.

ಬೆಳಿಗ್ಗೆ 10ಗಂಟೆಗೆ ಪ್ರವಾಸಿ ಮಂದಿರಕ್ಕೆ ಆಗಮಿಸುವ ಸಚಿವರು, ಪ್ರವಾಸಿ ಮಂದಿರ (ಸರ್ಕ್ಯೂಟ್ ಹೌಸ್)ನಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸುವರು.

ಬೆಳಿಗ್ಗೆ 11 ಗಂಟೆಗೆ ಹರಿಹರಕ್ಕೆ ತೆರಳಿ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮಧ್ಯಾಹ್ನ 12.30ಕ್ಕೆ ಹರಿಹರದಿಂದ ತುಮಕೂರಿಗೆ ತೆರಳುವರು.

**ಸಾಧನೆಗೆ ಅಭಿನಂದನೆಗಳು**

ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 31ನೇ ರ್‍ಯಾಂಕ್
ಮತ್ತು ಕರ್ನಾಟಕಕ್ಕೆ ಮೊದಲ ರ್‍ಯಾಂಕ್ ಪಡೆದುಕೊಂಡಿರುವ
ದಾವಣಗೆರೆಯ ಪ್ರಸಿದ್ಧ ಹೋಟೆಲ್ ಉದ್ದಿಮೆದಾರರಾದ
ಶ್ರೀ ಕೆ.ವಿ. ಆನಂದ ರಾವ್ ಅವರ ಮೊಮ್ಮಗ ಹಾಗೂ
ಶ್ರೀ ಕೆ.ಎ.ವಿಠ್ಠಲ್ ರಾವ್ ಮತ್ತು ಶ್ರೀಮತಿ ಸ್ಮಿತಾ ರಾವ್
ಅವರ ಪುತ್ರನಾದ ಚಿ|| ಅವಿನಾಶ್ ರಾವ್
ಅವರಿಗೆ ಹಾರ್ದಿಕ ಅಭಿನಂದನೆಗಳು.

- ♦ ಶ್ರೀಮತಿ ನಳಿನಿ ಅಚ್ಯುತ್, ಅಧ್ಯಕ್ಷರು
- ♦ ಶ್ರೀಮತಿ ದ್ರಾಕ್ಷಾಯಿಣಿ ಮೂರ್ತಿ
- ♦ ಶ್ರೀಮತಿ ಶಾಂತ ನಾಗರಾಜ್
- ♦ ಶ್ರೀಮತಿ ಉಮಾ ನಾಗರಾಜ್
- ♦ ಶ್ರೀಮತಿ ಕೋಮಲ ವಸಂತ್ ಕುಮಾರ್
- ♦ ಶ್ರೀಮತಿ ವಸುಧಾ ಕುಲಕರ್ಣಿ
- ♦ ಶ್ರೀಮತಿ ಉಮಾ ಶ್ರೀಧರಮೂರ್ತಿ
- ♦ ಶ್ರೀಮತಿ ಸಾವಿತ್ರಮ್ಮ ಶಾಸ್ತ್ರಿ
- ♦ ಶ್ರೀಮತಿ ಶ್ರೀಮತಿ ಚಂದ್ರಶೇಖರ್ ಅಡಿಗ, ಕಾರ್ಯದರ್ಶಿ
- ♦ ಶ್ರೀಮತಿ ಜಯಲಕ್ಷ್ಮಿ ಚಂದ್ರಶೇಖರ್
- ♦ ಶ್ರೀ ಮತಿ ಕಾಮಾಕ್ಷಿ ಪಟ್ಟಾಭಿರಾಮ
- ♦ ಶ್ರೀಮತಿ ಸುಮ ವೆಂಕಟೇಶ್
- ♦ ಶ್ರೀಮತಿ ಸರಸ್ವತಿ ನಿರಂಜನ್
- ♦ ಶ್ರೀಮತಿ ಆಶಾ ಭಾಗವತ್
- ♦ ಶ್ರೀಮತಿ ಬನಶಂಕರಿ ದೀಕ್ಷಿತ್

**ಬ್ರಾಹ್ಮಣ ಸಮಾಜದ ಮಹಿಳಾ ವಿಭಾಗ, ದಾವಣಗೆರೆ.**








ಕುಂದುವಾಡ ಕೆರೆಯ ಸುತ್ತ ಅರಳಿರುವ ಮೇ ಫ್ಲವರ್

# ಮಾನ್ಯತೆ ಹೊಂದಿದ ಖಾಸಗಿ ಪಿಯುಸಿ ಕಾಲೇಜುಗಳ ಪಟ್ಟಿ ಪ್ರಕಟ

ದಾವಣಗೆರೆ, ಜೂ.1- ಜಿಲ್ಲೆಯಲ್ಲಿ ಮಾನ್ಯತೆ ಹೊಂದಿದ ಹಾಗೂ ವಿಚ್ಛಿನ್ನತೆ ಇಲ್ಲದ ಖಾಸಗಿ ಪದವಿ ಪೂರ್ವ ಕಾಲೇಜುಗಳ ಪಟ್ಟಿಯನ್ನು ಉಪನಿರ್ದೇಶಕರ ಕಚೇರಿ ಪದವಿಪೂರ್ವ ಶಿಕ್ಷಣ ಇಲಾಖೆ ಕೊಠಡಿ ಸಂಖ್ಯೆ 47 ಎ ಬ್ಲಾಕ್, 2ನೇ ಮಹಡಿ, ಜಿಲ್ಲಾಡಳಿತ ಭವನ ಇಲ್ಲಿ ಪ್ರಕಟಿಸಿದ್ದು, ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಗಳನ್ನು ನಡೆಸಲು ಹಾಗು ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲು ಅರ್ಹತೆ ಹೊಂದಿರುವ ಕಾಲೇಜುಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಈ ಕಾಲೇಜುಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಖಾಸಗಿ ಪದವಿಪೂರ್ವ ಕಾಲೇಜುಗಳಲ್ಲಿ ದಾಖಲಾತಿ ಹೊಂದಬಾರದು. ಈ ಕುರಿತು ಯಾವುದೇ ಗೊಂದಲ ಇದ್ದಲ್ಲಿ ಮೇಲಿನ ಕಚೇರಿಯಲ್ಲಿ ಸ್ಪಷ್ಟೀಕರಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.



## ದೂರದರ್ಶನ ಚಂದನದಲ್ಲಿಂದು ಕಡಕೋಳ

ದೂರದರ್ಶನ ಚಂದನದಲ್ಲಿ ಇಂದು ಬೆಳಿಗ್ಗೆ 8 ರಿಂದ 9 ರವರೆಗೆ ಪ್ರಸಾರವಾಗುವ 'ನಮಸ್ಕಾರ ನಮ್ಮ ಕರ್ನಾಟಕ' ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಮಲ್ಲಿಕಾರ್ಜುನ ಕಡಕೋಳ ಅವರ ಸಂದರ್ಶನ ನಡೆಯಲಿದೆ.

# ಫೋಟಾನ್-1000 ಎಚ್, ಫೋಟಾನ್ 1000ಆರ್ ಸಾಧನಗಳ ಬಿಡುಗಡೆ

ಬೆಂಗಳೂರು, ಜೂ. 1- ಅತ್ಯಾಧುನಿಕ ಲೇಸರ್ ಡಿಇಡಿ ಆಧಾರಿತ ಹೈಬ್ರಿಡ್ ಮತ್ತು ರೋಬೋಟಿಕ್ ಮೆಟಲ್ 3ಡಿ ಪ್ರಿಂಟಿಂಗ್ ತಂತ್ರಜ್ಞಾನವನ್ನು ಒಳಗೊಂಡ ಭಾರತದ ಪ್ರಪ್ರಥಮ ಫೋಟಾನ್-1000ಎಚ್ ಮತ್ತು ಫೋಟಾನ್-1000ಆರ್ ಸಾಧನಗಳನ್ನು ಐಟಿ, ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಬಿಡುಗಡೆ ಮಾಡಿದ್ದಾರೆ.

ಈ ಅಂಗವಾಗಿ ಬಿಎಫ್‌ಡಬ್ಲ್ಯು ಮತ್ತು ಎಂ2ನೆಕ್ಸ್ಟ್ ಕಂಪನಿಗಳು ಪೀಣ್ಯದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಅವರು, ಈ ಕ್ಷೇತ್ರದ ಬೆಳವಣಿಗೆಗೆ ಅಗತ್ಯವಾಗಿರುವ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲು ಬೇಕಾದ ಅಗತ್ಯ ನೆರವನ್ನು ನೀಡಲು ರಾಜ್ಯ ಸರ್ಕಾರ ಸಿದ್ಧವಾಗಿದೆ ಎಂದರು.

ಉತ್ಪನ್ನಗಳನ್ನು ಲೋಕಾರ್ಪಣೆ ಮಾಡಿ ಮಾತ ನಾಡಿದ ಅವರು, ದೇವನಹಳ್ಳಿಯ ವಿಮಾನ ನಿಲ್ದಾಣದ ಪಕ್ಕದಲ್ಲೇ ಐದು ಎಕರೆ ಪ್ರದೇಶದಲ್ಲಿ 60 ಸಾವಿರ ಚದರಡಿ ವಿಸ್ತೀರ್ಣದ ಅತ್ಯಾಧುನಿಕ ಏರೋಸ್ಪೇಸ್ ಪಾರ್ಕ್ ತಲೆಯೆತ್ತುತ್ತಿದ್ದು, ಈ ವರ್ಷದ ಸೆಪ್ಟೆಂಬರ್ ಹೊತ್ತಿಗೆ ಇದರ ಕಾಮಗಾರಿ ಮುಗಿಯಲಿದೆ. ಈ ಕಟ್ಟಡದಲ್ಲಿ ಲೇಸರ್ ಡಿಇಡಿ ಮತ್ತು ರೋಬೋಟಿಕ್ ಮೆಟಲ್ ತ್ರೀ-ಡಿ ಪ್ರಿಂಟಿಂಗ್ ಕ್ಷೇತ್ರಕ್ಕೆ ಅಗತ್ಯವಿರುವ ಜಾಗವನ್ನು ಒದಗಿಸಲಾಗುವುದು ಎಂದರು.

# 9 ಸಾವಿರ ರೂ.ಗಳ ವೇತನ ಶೋಷಣೆ : ಸುಪ್ರೀಂ ಕೋರ್ಟ್

ನವದೆಹಲಿ, ಜೂ. 1 – ಒಡಿಶಾದ ಗೃಹ ರಕ್ಷಕರಿಗೆ ನೀಡುತ್ತಿರುವ ಕಡಿಮೆ ವೇತನದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ರಾಜ್ಯ ಸರ್ಕಾರ ತಿಂಗಳಿಗೆ ಕೇವಲ 9 ಸಾವಿರ ರೂ. ನೀಡುತ್ತಿರುವುದನ್ನು ತರಾಟೆಗೆ ತೆಗೆದುಕೊಂಡಿದೆ. ದಿನಕ್ಕೆ 300 ರೂ.ಗಳಂತೆ ತಿಂಗಳಿಗೆ 9 ಸಾವಿರ ರೂ. ಮಾತ್ರ ವೇತನವಾಗಿ ನೀಡಲಾಗುತ್ತಿದೆ ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಷಾ ಹಾಗೂ ಬಿ.ವಿ. ನಾಗರತ್ನ ಅವರನ್ನು ಒಳಗೊಂಡ ಪೀಠ ಹೇಳಿದೆ.

ಹಲವಾರು ಗೃಹರಕ್ಷಕರು 15 ವರ್ಷಗಳಿಗೂ ಹೆಚ್ಚು ಕಾಲದಿಂದ ಕೆಲಸ ಮಾಡುತ್ತಿದ್ದಾರೆ. ರಾಜ್ಯ ಪೊಲೀಸ್ ಸಿಬ್ಬಂದಿ ಆರು ವರ್ಷಗಳ ತಮ್ಮ ಗುತ್ತಿಗೆ ನೇಮಕದ ನಂತರ 21,700 ರೂ. ವೇತನ ಪಡೆಯುತ್ತಿದ್ದಾರೆ ಹಾಗೂ ತುಟ್ಟಿ ಭತ್ಯೆ ಸಹ ಪಡೆಯುತ್ತಿದ್ದಾರೆ ಎಂಬುದನ್ನು ನ್ಯಾಯಾಲಯ ಪರಿಗಣಿಸಿದೆ.

ತಿಂಗಳಿಗೆ 9 ಸಾವಿರ ರೂ. ವೇತನ ನೀಡುವುದು ಶೋಷಣೆಯಲ್ಲದೇ ಬೇರೇನೂ ಅಲ್ಲ. ಇಷ್ಟು ಕಡಿಮೆ ವೇತನದಲ್ಲಿ ಗೃಹ ರಕ್ಷಕರು ಹೇಗೆ ಬದುಕಲು ಸಾಧ್ಯ? ತಮ್ಮ ಕುಟುಂಬವನ್ನು ಹೇಗೆ ನಿರ್ವಹಿಸಲು ಸಾಧ್ಯ? ಗೃಹ ರಕ್ಷಕರು ಇತರೆ ಪೊಲೀಸ್ ಸಿಬ್ಬಂದಿಯಂತೆಯೇ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ನ್ಯಾಯಾಲಯ ಹೇಳಿದೆ. ಗೃಹ ರಕ್ಷಕರಿಗೆ ಕೇವಲ 9 ಸಾವಿರ ರೂ. ವೇತನ ನೀಡುವ ನಿರ್ಧಾರ ಮರು ಪರಿಗಣಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವುದಾಗಿ ಸುಪ್ರೀಂ ಕೋರ್ಟ್ ಹೇಳಿದೆ.

ಗೃಹ ರಕ್ಷಕರಿಗೆ ದಿನಕ್ಕೆ 533 ರೂ.ಗಳ ವೇತನ ನೀಡಬೇಕೆಂದು ಒರಿಸ್ಸಾ ಹೈಕೋರ್ಟ್ ವಿಭಾಗೀಯ ಪೀಠ ಆದೇಶ ಹೊರಡಿಸಿತ್ತು. ಈ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು.

## ವೈಮಾನಿಕ ಇಂಧನ ಬೆಲೆ ಇಳಿಕೆ

ನವದೆಹಲಿ, ಜೂ. 1 – ವೈಮಾನಿಕ ಇಂಧನದ ಬೆಲೆಯನ್ನು ಬುಧವಾರ ಶೇ.1.3ರಷ್ಟು ಇಳಿಸಲಾಗಿದೆ. ಹತ್ತು ಸುತ್ತು ಬೆಲೆ ಏರಿಕೆ ಮಾಡಿದ ನಂತರ ಇದೇ ಮೊದಲ ಬಾರಿಗೆ ಬೆಲೆ ಇಳಿಕೆ ಮಾಡಲಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯಾಗಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಇದೇ ವೇಳೆ ವಾಣಿಜ್ಯ ಬಳಕೆಯ ಎಲ್.ಪಿ.ಜಿ. ಅನಿಲದ ಬೆಲೆಯನ್ನು 19 ಕೆಜಿ ಸಿಲಿಂಡರ್‌ಗೆ 135 ರೂ.ಗಳಷ್ಟು ಇಳಿಕೆ ಮಾಡಲಾಗಿದೆ. ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಪ್ರಮುಖವಾಗಿ ವಾಣಿಜ್ಯ ಸಿಲಿಂಡರ್ ಬಳಕೆಯಾಗುತ್ತದೆ.

ವೈಮಾನಿಕ ಇಂಧನದ ಬೆಲೆಯನ್ನು ಕಿಲೋ ಲೀಟರ್‌ಗೆ 1,563.97 ರೂ.ಗಳಷ್ಟು ಇಳಿಕೆ ಮಾಡಲಾಗಿದೆ. ರಾಜಧಾನಿ ದೆಹಲಿಯಲ್ಲಿ ಪ್ರತಿ ಸಾವಿರ ಲೀಟರ್ ಇಂಧನದ ಬೆಲೆ 1,21,475.74 ರೂ. ಆಗಿದೆ.

ಈ ಹಿಂದೆ ಹತ್ತು ಕಂತುಗಳಲ್ಲಿ ಒಟ್ಟಾರೆ 6,188.25 ರೂ.ಗಳ ಬೆಲೆ ಏರಿಕೆ ಮಾಡಲಾಗಿತ್ತು. ಮೇ 16ರಂದು ವೈಮಾನಿಕ ಇಂಧನದ ಬೆಲೆ ಕಿಲೋ ಲೀಟರ್‌ಗೆ ದಾಖಲೆಯ 1,23,039.71 ರೂ.ಗಳಿಗೆ ತಲುಪಿತ್ತು.

ವಾಣಿಜ್ಯ ಎಲ್.ಪಿ.ಜಿ. ಬೆಲೆ ರಾಜಧಾನಿ ದೆಹಲಿಯಲ್ಲಿ 2,219 ರೂ.ಗಳಿಗೆ ಇಳಿಕೆ ಮಾಡಲಾಗಿದೆ. ಇದಕ್ಕೂ ಮುಂಚೆ ಬೆಲೆ 2,354 ರೂ. ಆಗಿತ್ತು. ಈ ವರ್ಷದಲ್ಲಿ ವಾಣಿಜ್ಯ ಸಿಲಿಂಡರ್ ಬೆಲೆಯನ್ನು 355.5 ರೂ.ಗಳಷ್ಟು ಹೆಚ್ಚಿಸಲಾಗಿದೆ. ಆದರೆ, ಗೃಹ ಬಳಕೆಯ ಅಡುಗೆ ಅನಿಲದ ಬೆಲೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಕಳೆದ ಮೇ 19ರಂದು ಗೃಹ ಬಳಕೆಯ ಅಡುಗೆ ಅನಿಲ ಬೆಲೆಯನ್ನು ಸಿಲಿಂಡರ್‌ಗೆ 3.50 ರೂ.ಗಳಷ್ಟು ಹೆಚ್ಚಿಸಲಾಗಿತ್ತು.


## ರಾಣೇಬೆನ್ನೂರಿನಲ್ಲಿ ವಿದ್ಯುತ್ ವ್ಯತ್ಯಯ

ಇಂದು ಮತ್ತು ನಾಡಿದ್ದು ದಿನಾಂಕ 4 ರಂದು ವಿದ್ಯುತ್ ಸರಬರಾಜು ನಿಲುಗಡೆಯಾಗಲಿದೆ. ಗೂಡ್ಸ್ ಶೆಡ್ ರೋಡ್, ಹಲಗೇರಿ ರೋಡ್, ಎಂ.ಜಿ. ರೋಡ್, ಸ್ಟೇಷನ್ ರೋಡ್, ರಂಗನಾಥ ನಗರ, ದೊಡ್ಡಪೇಟೆ, ಜನತಾ ಬಜಾರ್, ಹನಗೋಡಿ ಓಣಿಗಳಲ್ಲಿ ಅಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಇರುವುದಿಲ್ಲ.
















JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte